# ಅನಂತಪಥ

ANANTHKUMAR
PRATISHTHANA



ಪುಟ 5
ದೇಶ ಮೊದಲು ಸಂವಾದ
ಕೃತಕ ಬುದ್ಧಿಮತ್ತೆ: "ಭವಿಷ್ಯದ ಆರೋಗ್ಯ ಕ್ರಾಂತಿ"





ಸಂಪುಟ - 6 ಆಗಸ್ಟ್ - 2025 ಸಂಚಿಕೆ - 62


## ತಂದೆ—ಮಗನಂತಿದ್ದ ವಿಶಿಷ್ಟ ಬಾಂಧವ್ಯ

### ದೇಶದ ಅಭಿವೃದ್ಧಿಗೆ ಹೊಸ ಶಕ್ತಿ ತುಂಬಿದ ಅಟಲ್ ಜೀ, ಅನಂತಕುಮಾರ್ ಜೋಡಿ

ಅಟಲ್ ಬಿಹಾರಿ ವಾಜಪೇಯಿ ಈ ದೇಶ ಕಂಡ ಧೀಮಂತ ನಾಯಕ. ಪಕ್ಷಾತೀತವಾಗಿ ಅಟಲ್ ಜೀ ಅವರನ್ನು ಮತ್ತು ಅವರ ಆದರ್ಶ, ಮೌಲ್ಯಗಳನ್ನು ಗೌರವಿಸಲಾಗುತ್ತಿದೆ. ಇತ್ತೀಚೆಗೆಷ್ಟೇ ಅಂದರೆ ಆಗಸ್ಟ್ 16ರಂದು ಅಟಲ್ ಜೀಯವರ ಪುಣ್ಯಸ್ಮರಣೆ ಆಚರಿಸಲಾಯಿತು. ಅಟಲ್ ಜೀ ಅವರೊಂದಿಗೆ ಅನಂತಕುಮಾರ್ ಅವರು ನಿಕಟ ಬಾಂಧವ್ಯ ಹೊಂದಿದ್ದರು ಮತ್ತು ಇವರ ಚಿಂತನೆಗಳು, ಕಾರ್ಯಗಳು ದೇಶದ ಅಭಿವೃದ್ಧಿಗೆ ಹೊಸ ವೇಗ ನೀಡಿದವು. ಈ ಕುರಿತಾದ ಅವಲೋಕನ ಇಲ್ಲಿದೆ.

ರಾಜನೀತಿಯಯಲ್ಲಿ ಇತ್ತೀಚಿನ ದಿನಗಳಲ್ಲಿ ಇಂಥ ಅಪೂರ್ವ ಜೋಡಿಯನ್ನು ಕಾಣುವುದೇ ವಿರಳ. ಆದರೆ, ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಮತ್ತು ಮಾಜಿ ಕೇಂದ್ರ ಸಚಿವ ಅನಂತಕುಮಾರ್ ಅವರ ನಡುವಿನ ಬಾಂಧವ್ಯ ತಂದೆ-ಮಗನಂಥ ವಾತ್ಸಲ್ಯವನ್ನೂ, ಗುರು-ಶಿಷ್ಯರಂಥ ಗೌರವವನ್ನೂ ಹೊಂದಿತ್ತು. ಮುಖ್ಯವಾಗಿ, ಇವರಿಬ್ಬರ ನಡುವಿನ ಸಂಬಂಧದಲ್ಲಿ ಅಂತಃಕರಣ, ಆಪ್ತತೆ, ಕಾಳಜಿ ಇತ್ತು. ಭಾರತೀಯ ಜನತಾ ಪಕ್ಷ ಅಧಿಕಾರಕ್ಕೆ ಬಂದಿದ್ದು, ಅಟಲ್ ಜೀ ಪ್ರಧಾನಿ, ಅನಂತಕುಮಾರ್ ಅವರು ಕೇಂದ್ರ ಸಚಿವರಾಗಿದ್ದು ನಂತರದ ದಿನಗಳಲ್ಲಿ. ಆದರೆ, ಪಕ್ಷ ಸಂಘಟನೆಯ ಸಂದರ್ಭದಿಂದ ಹಿಡಿದು, ಪಕ್ಷದ ಬೇರುಗಳನ್ನು ಎಲ್ಲ ಕಡೆ ವಿಸ್ತರಿಸುವ ಕಾರ್ಯದಲ್ಲಿ ಇವರಿಬ್ಬರ ಕೊಡುಗೆ, ಶ್ರಮ ಅವಿಸ್ಮರಣೀಯ.

ಅದು 1985ರ ಕಾಲ. ರಾಜಧಾನಿ ದೆಹಲಿಯಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಬೃಹತ್ ಸಮಾವೇಶ. ಇದರಲ್ಲಿ ಹನ್ನೆರಡು ಸಾವಿರಕ್ಕೂ ಅಧಿಕ ಜನರು ಪಾಲ್ಗೊಂಡಿದ್ದರು. ಸಮಾವೇಶದ ಆಯೋಜನೆ ಮತ್ತು ಅದನ್ನು ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಅನಂತಕುಮಾರ್ ಅವರಿಗೆ ಮಹತ್ತರ ಜವಾಬ್ದಾರಿಯಿತ್ತು. ಹಾಗಾಗಿ, ಸಮಾವೇಶದ ಸಿದ್ಧತೆಗಾಗಿ ಎರಡು ತಿಂಗಳುಗಳ ಕಾಲ ದೆಹಲಿಯಲ್ಲೇ ವಾಸ್ತವ್ಯ ಹೂಡಿದ್ದರು. ಆ ಸಂದರ್ಭಧಲ್ಲಿ ಅಟಲ್ ಜೀ ಮತ್ತು ಲಾಲಕೃಷ್ಣ ಆಡ್ವಾಣಿಯವರೊಂದಿಗೆ ನಿಕಟವಾಗಿ ಕೆಲಸ ಮಾಡುವ ಅವಕಾಶ ಪ್ರಾಪ್ತವಾಯಿತು ಮತ್ತು ಆಗೆಲ್ಲ ಸಂಘಟನೆಯ ಕೆಲಸಗಳು ಕೌಟುಂಬಿಕ ಬಾಂಧವ್ಯದಂತೆ ಸುಗಮವಾಗಿ ನಡೆಯುತ್ತಿದ್ದವು.



ಅನಂತಕುಮಾರ್ ಅವರು ಎರಡು ತಿಂಗಳ ಕಾಲ ದಿನದ ಒಂದು ಹೊತ್ತಿನ ಊಟವಾದರೂ ಅಟಲ್ ಜೀ ಅಥವಾ ಆಡ್ವಾಣಿ ಅವರ ನಿವಾಸದಲ್ಲಿ ಮಾಡುತ್ತಿದ್ದರು.

1991ರಲ್ಲಿ ಅನಂತಕುಮಾರ್ ಅವರು ಬಿಜೆಪಿ ಕೇಂದ್ರ ಕಾರ್ಯಕಾರಿಣಿ ಸಮಿತಿಯ ಸದಸ್ಯರಾದರು. ಆಗಿನಿಂದ ದೆಹಲಿ ಓಡಾಟ ಹೆಚ್ಚಿತು. ಅಲ್ಲದೆ, ಅಟಲ್ ಜೀ, ಆಡ್ವಾಣಿಯವರೊಂದಿಗಿನ ಬಾಂಧವ್ಯ ಮತ್ತಷ್ಟು ಬೆಳೆಯಿತು. ಅಟಲ್ ಜೀ ಬೆಂಗಳೂರಿಗೆ ಬಂದರೆ ಅವರನ್ನು ವಿಮಾನನಿಲ್ದಾಣದಲ್ಲಿ ಬರಮಾಡಿಕೊಳ್ಳುವುದರಿಂದ ಹಿಡಿದು ಕಾರ್ಯಕ್ರಮದಲ್ಲಿ ಅವರ ಜತೆ ಇದ್ದು, ವಾಪಸ್ ಅವರನ್ನು ವಿಮಾನ ನಿಲ್ದಾಣಕ್ಕೆ ಬಿಡುವವರೆಗೂ ಅನಂತಕುಮಾರ್ ಎಲ್ಲ ಜವಾಬ್ದಾರಿ ನಿರ್ವಹಿಸುತ್ತಿದ್ದರು. ಹಾಗಾಗಿಯೇ, ಅಟಲ್ ಜೀಯವರಿಗೂ ಅನಂತಕುಮಾರ್ ಅವರ ಮೇಲೆ ವಿಶೇಷ ಅಭಿಮಾನ, ಅಕ್ಕರೆ ಇತ್ತು. ಬೇರೆ ಬೇರೆ ಸಂದರ್ಭಗಳಲ್ಲಿ ಅಟಲ್ ಜೀಯವರ ಮನೆಗೆ ಭೇಟಿ ನೀಡುತ್ತಲೇ ಇದ್ದರು.

**ಪುಟ 4ರಲ್ಲಿ ಮುಂದುವರೆದಿದೆ..**

## ರಾಮ ಜನ್ಮಭೂಮಿಯಲ್ಲಿ ಸೀತಾ ಅಶೋಕ: 500 ನೇ ಹಸಿರು ಭಾನುವಾರ ಆಚರಣೆ



ಪರಿಸರ ಸಂರಕ್ಷಣೆಯ ದೃಷ್ಟಿಯಿಂದ ಶ್ರೀ ಅನಂತಕುಮಾರ್ ಅವರು ಆರಂಭಿಸಿದ ಹಸಿರು ಭಾನುವಾರ (ಸಸ್ಯಾಗ್ರಹ) ಕಾರ್ಯಕ್ರಮವು ಶ್ರೀರಾಮನ ದಿವ್ಯ ಆಶೀರ್ವಾದದೊಂದಿಗೆ ಭಾರತದ ಹೃದಯ ಭಾಗದಲ್ಲಿರುವ ಅಯೋಧ್ಯೆಯ ನಗರದ ಡಾಭಾಸೇಮರ್ ಕಾಂಪೋಸಿಟ್ ಶಾಲಾ ಆವರಣದಲ್ಲಿ ಜುಲೈ 27, 2025ರಂದು ಯಶಸ್ವಿಯಾಗಿ ಜರುಗಿತು. ಇದು ಸಸ್ಯಾಗ್ರಹದ 500ನೇ ಹಸಿರು ಭಾನುವಾರ ಕಾರ್ಯಕ್ರಮವಾಗಿದ್ದು ಪಶ್ಚಿಮ ಘಟ್ಟದಿಂದ ತರಿಸಲಾದ 60ಕ್ಕೂ ಹೆಚ್ಚು ಸೀತಾ ಅಶೋಕ ಗಿಡಗಳನ್ನು ನೆಡಲಾಯಿತು.

ಹಸಿರು ಭಾನುವಾರ ಕಾರ್ಯಕ್ರಮವು ಸಂಸ್ಥೆಯ ಪ್ರಮುಖ ಯೋಜನೆಯಾಗಿದ್ದು, ಪ್ರತಿ ಭಾನುವಾರ ಗಿಡಮರಗಳನ್ನು ನೆಡುವ ಮೂಲಕ ಪರಿಸರ ಸಂರಕ್ಷಣೆಯನ್ನು ಉತ್ತೇಜಿಸುತ್ತದೆ. ಸಂಸ್ಥೆಯು ಕಳೆದ 10 ವರ್ಷಗಳಲ್ಲಿ ಬೆಂಗಳೂರು ಸೇರಿದಂತೆ ಹುಬ್ಬಳ್ಳಿ , ರಾಯಚೂರು , ಕಲಬುರಗಿ, ಕೋಲಾರ, ಜೋಧಪುರ ಮೊದಲಾದ ಕಡೆಗಳಲ್ಲಿ ಸಾವಿರಾರು ಗಿಡಗಳನ್ನು ನೆಟ್ಟು ಪರಿಸರ ಸಮತೋಲನಕ್ಕೆ ಕೊಡುಗೆ ನೀಡಿದೆ. 500ನೇ ಹಸಿರು ಭಾನುವಾರ ಕಾರ್ಯಕ್ರಮವನ್ನು ಅಯೋಧ್ಯೆಯಲ್ಲಿ ಆಯೋಜಿಸುವ ಮೂಲಕ, ಸಂಸ್ಥೆಯು ಶ್ರೀರಾಮನ ನಗರದಲ್ಲಿ ಪರಿಸರ ಜಾಗೃತಿಯನ್ನು ಮೂಡಿಸುವ ಮಹತ್ವದ ಹೆಜ್ಜೆಯನ್ನು ಇಟ್ಟಿದೆ.

* 500 ನೇ ಯಶಸ್ವಿ ಹಸಿರು ಭಾನುವಾರ
* 10 ವರ್ಷದಿಂದ ನಿರಂತರ ಗಿಡ ನೆಡುವಿಕೆ
* 10+ ನಗರಗಳಲ್ಲಿ ಆಚರಣೆ
* ಲಕ್ಷಕ್ಕೂ ಹೆಚ್ಚೂ ಸಸಿ ನೆಡಲಾಗಿದೆ

ಪುಟ 2 ರಲ್ಲಿ ಮುಂದುವರಿದಿದೆ





## ರಾಮ ಜನ್ಮಭೂಮಿಯಲ್ಲಿ ಸೀತಾ ಅಶೋಕ: 500 ನೇ ಹಸಿರು ಭಾನುವಾರ ಆಚರಣೆ



ಕಾರ್ಯಕ್ರಮದಲ್ಲಿ ಮಾತಾನಾಡಿದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಕಳೆದ 10 ವರ್ಷಗಳಿಂದ ನಿರಂತವಾಗಿ ನಡೆಯುತ್ತಿರುವ ಹಸಿರು ಭಾನುವಾರ ಕಾರ್ಯಕ್ರಮದ ಬಗ್ಗೆ ವಿವರಣೆ ನೀಡಿದರು. ಕೋವಿಡ್-19 ನಂತಹ ಕಷ್ಟದ ಸಮಯದಲ್ಲೂ ಕಾರ್ಯಕ್ರಮವನ್ನು ಮುಂದುವರೆಸಿದ ಸಂಸ್ಥೆಯ ಕಾರ್ಯಕರ್ತರನ್ನು ಅವರು ಅಭಿನಂದಿಸಿದರು. “ಪರಿಸರ ಸಂರಕ್ಷಣೆಯು ನಮ್ಮ ಜೀವನದ ಅವಿಭಾಜ್ಯ ಅಂಗವಾಗಬೇಕು. ಹಸಿರು ಭಾನುವಾರದ ಮೂಲಕ ನಾವು ಗಿಡಗಳನ್ನು ನೆಡುವುದಲ್ಲದೆ, ಸಮಾಜದಲ್ಲಿ ಪರಿಸರ ಜಾಗೃತಿಯನ್ನು ಮೂಡಿಸುತ್ತಿದ್ದೇವೆ” ಎಂದು ಅವರು ಹೇಳಿದರು. ಸಂಸ್ಥೆಯ ಯೋಜನೆಗಳಾದ ನಿತ್ಯ ಅನ್ನದಾನ, ಪ್ಲೇಟ್ ಬ್ಯಾಂಕ್ ಮುಂತಾದ ಚಟುವಟಿಕೆಗಳ ಬಗ್ಗೆ ಅವರು ವಿವರವಾಗಿ ತಿಳಿಸಿದರು



ಕಾರ್ಯಕ್ರಮದಲ್ಲಿ ಸ್ಥಳೀಯ ನಿವಾಸಿಗಳು ಮತ್ತು ಸಂಸ್ಥೆಯ ಸದಸ್ಯರು ಸಸಿಗಳನ್ನು ನೆಡುವುದರ ಮೂಲಕ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ, ಅದಮ್ಯ ಚೇತನ ಸಂಸ್ಥೆಯ ಹಿತೈಷಿಗಳು, ಶ್ರೀ ಅನಂತಕುಮಾರ್ ಅವರ ಒಡನಾಡಿಗಳು ಹಾಗೂ ಇತರ ಗಣ್ಯರು ಕೂಡ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲ ಕಾರ್ಯಕರ್ತರಿಗೂ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಸ್ಟೀಲ್ ಬಾಟಲಿಗಳನ್ನು ನೀಡಿ ಗೌರವಿಸಿದರು..

ಸಂಜೆ 6 ಗಂಟೆಗೆ “ಸ್ವಚ್ಛ ಅಯೋಧ್ಯೆಗಾಗಿ ಒಂದು ಹೆಜ್ಜೆ” ಕಾರ್ಯಕ್ರಮದ ಅಂಗವಾಗಿ ಡಾ. ರಾಜೇಂದ್ರ ಹೆಗಡೆಯವರು “ಹಸಿರು ಜೀವನ ಶೈಲಿ” ಕುರಿತು ವಿಶೇಷ ಉಪನ್ಯಾಸ ನೀಡಿದರು. ಅವರು ಪರಿಸರ ಸ್ನೇಹಿ ಬದುಕಿನ ಅಗತ್ಯತೆ, ಪ್ಲಾಸ್ಟಿಕ್ ಬಳಕೆಯ ನಿಯಂತ್ರಣ, ತ್ಯಾಜ್ಯ ನಿರ್ವಹಣೆ ಹಾಗೂ ಪ್ರತಿಯೊಂದು ಮನೆಯಲ್ಲಿ ಹಸಿರು ಪರಿವರ್ತನೆ ತರುವ ಸರಳ ವಿಧಾನಗಳ ಬಗ್ಗೆ ಮಾತನಾಡಿದರು. ಅಯೋಧ್ಯೆಯ 500ನೇ ಹಸಿರು ಭಾನುವಾರವು ಕಾರ್ಯಕ್ರಮವು ಪರಿಸರ ಸಂರಕ್ಷಣೆಗೆ ಹೊಸ ಪ್ರೇರಣೆಯಾಗಿ, ಹಸಿರು ಜೀವನ ಶೈಲಿಯ ಮಹತ್ವವನ್ನು ಸಮಾಜಕ್ಕೆ ತಲುಪಿಸಿತು.








ಪ್ರತಿ ಮಂಗಳವಾರ ಮುಂಜಾನೆ 6:35ಕ್ಕೆ ಮತ್ತು ಸಂಜೆ 6:10ಕ್ಕೆ ಮೈಸೂರು ಅಕಾಶವಾಣಿಯಿಂದ ಬಿತ್ತರಗೊಳ್ಳುತ್ತಿರುವ ಶ್ರದ್ಧೆಯಶಿಲ್ಪ ಬಾನುಲಿ ಕಾರ್ಯಕ್ರಮವನ್ನು ಅದಮ್ಯ ಚೇತನ ಸಂಸ್ಥೆಯು ಪ್ರಾಯೋಜಿಸುತ್ತಿದೆ. ಶ್ರೀ ಟಿ. ಎಸ್ ಗೋಪಾಲ್ ಪ್ರಸ್ತುತ ಪಡಿಸುತ್ತಿರುವ ಈ ಕಾರ್ಯಕ್ರಮವು ಆಕಾಶವಾಣಿಯ ಜನಪ್ರಿಯ ಕಾರ್ಯಕ್ರಮವಾಗಿದೆ. ಕರ್ನಾಟಕ ದೇವಾಲಯಗಳನ್ನು ಪರಿಚಯಿಸುವ ಈ ಸರಣಿಯಲ್ಲಿ ಈ ತಿಂಗಳುಕರ್ನಾಟಕದ ಗಡಿ ಪ್ರದೇಶದಲ್ಲಿರುವ ಆಂಧ್ರಪ್ರದೇಶದ ಮುತುಕೂರಿನ ಕೇಶವ ದೇವಾಲಯ, ಬಾಗಲಕೋಟೆಜಿಲ್ಲೆಯ ಬಾದಾಮಿಯ ಗುಹಾ ದೇವಾಲಯ, ಬೆಂಗಳೂರು ದಕ್ಷಿಣ ಜಿಲ್ಲೆಯ ಹಾರೋಹಳ್ಳಿಯ ಅರುಣಾಚಲೇಶ್ವರ ದೇವಾಲಯ, ಚಿಕ್ಕಮಗಳೂರು ಜಿಲ್ಲೆಯ ದೇವನೂರಿನ ಲಕ್ಷ್ಮೀಕಾಂತ ದೇವಾಲಯವನ್ನು ಪರಿಚಯಿಸಲಾಯಿತು.









ಅನಂತಯಾನ


ನಿರೂಪಣೆ : ಟಿ.ಎಸ್. ಗೋಪಾಲ್

# ಇಂದಿರಾ ಈಸ್ ನಾಟ್ ಇಂಡಿಯಾ

## ಅಧ್ಯಾಯ-33

ಜನವರಿ ಮುಗಿದು ಫೆಬ್ರವರಿ ತಿಂಗಳು ಪ್ರಾರಭವಾಗುತ್ತಿದ್ದಂತೆ ಇನ್ನು ಕಾಲೇಜಿಗೆ ಹೊರಡಲು ಅನಂತಕುಮಾರರ ಗೆಳೆಯರ ಗುಂಪು ಸನ್ನದ್ಧವಾಯಿತು. ಪರೀಕ್ಷೆಗಳು ಸಮೀಪಿಸುತ್ತಿವೆಯೆನ್ನುವ ಆತಂಕವೂ ಶುರುವಾಯಿತು. ಇನ್ನು ಕಾಲೇಜಿಗೆ ಹೋದರೆ ಆಡಳಿತ ಮಂಡಳಿಯ ಪ್ರತಿಕ್ರಿಯೆ ಹೇಗಿದ್ದೀತು, ಸರ್ಕಾರ ಬೇರೇನಾದರೂ ನೆಪಹೂಡಿ ಪರೀಕ್ಷೆಯ ಹಾಜರಿಗೆ ಅಡ್ಡಿಯುಂಟುಮಾಡಬಹುದೋ ಹೇಗೆ ಹೇಳುವಂತಿರಲಿಲ್ಲ.

ಪ್ರಿನ್ಸಿಪಾಲರಾಗಿದ್ದ ಚಂದ್ರಶೇಖರ ಬೆಲ್ಲದ್ ಹಿರಿಯ ಪ್ರಾಧ್ಯಾಪಕರು, ಒಳ್ಳೆಯ ಆಡಳಿತಗಾರರು. ಗಣಿತಶಾಸ್ತ್ರದ ಉತ್ತಮ ಬೋಧಕರೂ ಆಗಿದ್ದರು. ತಾವೆಷ್ಟೇ ಕೇಳಿಕೊಂಡರೂ, ಬುದ್ಧಿ ಹೇಳಿದರೂ ಈ ಸತ್ಯಾಗ್ರಹಿ ಹುಡುಗರು ತಮ್ಮ ಮಾತು ಕೇಳಲಿಲ್ಲವೆಂಬ ಅಸಮಾಧಾನ ಅವರ ಮನಸ್ಸಿನಲ್ಲಿ ಉಳಿದುಕೊಂಡಿದ್ದಿರಬಹುದು. ಈ ತುರ್ತುಪರಿಸ್ಥಿತಿಯ ಕಾಲದಲ್ಲಿ ಈ ಹುಡುಗರಿಂದಾಗಿ ತಮ್ಮ ಸಂಸ್ಥೆಗೆ ಒಂದು ಕೆಟ್ಟ ಹೆಸರು ಬರುವ ಹಾಗಾಯಿತು, ಪೋಲೀಸರು ಪ್ರವೇಶಮಾಡುವ ಹಾಗಾಯಿತು ಎಂಬ ಬೇಸರವೂ ಇದ್ದಿತು. ಹಾಗೆಂದು ಹುಡುಗರು ತೀರಾ ತಪ್ಪಾಗಿಯೇ ನಡೆದುಕೊಂಡರೆಂದು ಅವರೂ ಭಾವಿಸಿರಲಿಕ್ಕಿಲ್ಲ.



ಅಧ್ಯಾಪಕವರ್ಗವೆಲ್ಲ ಸತ್ಯಾಗ್ರಹಿಗಳ ಪರವಾಗಿಯೇ ಇದ್ದರು. ಆ ವರ್ಷವಂತೂ ಅನಂತಕುಮಾರ, ಅಚ್ಯುತ ಲಿಮಯೆ, ವಿಷ್ಣುಕಾಂತ ಮೊದಲಾದವರೆಲ್ಲ ಕಾಲೇಜಿಗೆ ಹೋಗಿದ್ದೇ ಕಡಿಮೆ. ವಿಜ್ಞಾನ ವಿದ್ಯಾರ್ಥಿಗಳು ಪ್ರಾಯೋಗಿಕ ತರಗತಿಗಳಿಗೆ ಹಾಜರಾಗುವುದಂತೂ ಕಡ್ಡಾಯವೇ ಆಗಿತ್ತು.

ತಮ್ಮ ಕಾಲೇಜಿನ ವಿದ್ಯಾರ್ಥಿಗಳು ಸತ್ಯಾಗ್ರಹದಲ್ಲಿ ಭಾಗವಹಿಸಿ ಸೆರೆಮನೆವಾಸವನ್ನೂ ಮುಗಿಸಿ ಬಂದಿದ್ದಾರೆನ್ನುವುದು ಕಾಲೇಜಿನ ಅಧ್ಯಾಪಕರಿಗೆಲ್ಲ ಬಹು ಅಭಿಮಾನದ ವಿಷಯವಾಗಿತ್ತು. ಅವರೆಲ್ಲ ಈ ವಿದ್ಯಾರ್ಥಿಗಳನ್ನು ವಿಶ್ವಾಸದಿಂದ ಕಂಡರು. ಅವರಿಗಾಗಿ ವಿಶೇಷ ಪ್ರಾಯೋಗಿಕ ತರಗತಿಗಳನ್ನು ಏರ್ಪಡಿಸಿ ಪರೀಕ್ಷೆಗೆ ಅಗತ್ಯವಾದ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟರು. ಅವರಿಗೆ ತಂತಮ್ಮ ವಿಷಯಗಳ ನೋಟ್ಸ್ ಒದಗಿಸುವ ಔದಾರ್ಯ ತೋರಿದರು. ಅಂತಿಮ ಪರೀಕ್ಷೆ ಎದುರಿಸಲು ಬೇಕಾದ ಸಲಹೆಸೂಚನೆಗಳನ್ನೂ ನೀಡಿ ಸಹಕರಿಸಿದರು.

ಅನಂತಕುಮಾರ್ ಮತ್ತವರ ಗೆಳೆಯರು ಈಗ ವಿದ್ಯಾರ್ಥಿ ಸಮುದಾಯದ 'ಹೀರೋ'ಗಳೇ ಆಗಿದ್ದರು. ಅವರೇನೂ ಉಳಿದ ಮಕ್ಕಳಿಗಿಂತ ವೈಚಾರಿಕ ಚಿಂತನೆಯಲ್ಲಿ ಮುಂದಿದ್ದವರಲ್ಲ. ಆದರೆ ರಾಷ್ಟ್ರಪ್ರೇಮದ ಭಾವುಕ ಸೆಳೆತ ಉಳಿದ ಹುಡುಗರಿಗಿಂತ ಅವರಲ್ಲಿ ಮಿಗಿಲಾಗಿತ್ತು. ಕುಟುಂಬದವರ ಪ್ರೋತ್ಸಾಹದ ಕೊರತೆ, ಭಯ, ಹಿಂಜರಿಕೆಗಳು ಇಲ್ಲದಿದ್ದಲ್ಲಿ ಉಳಿದ ವಿದ್ಯಾರ್ಥಿಗಳೂ ಸತ್ಯಾಗ್ರಹಿಗಳೇ ಆಗಿರುತ್ತಿದ್ದರೇನೋ!

ಹೀಗಾಗಿ ತಮ್ಮ ಪರವಾಗಿಯೇ ತಮ್ಮ ಪ್ರತಿನಿಧಿಗಳಾಗಿ ಈ ಸಹಪಾಠಿಗಳು ಹೋರಾಟದಲ್ಲಿ ಭಾಗವಹಿಸಿ ಬಂದಿದ್ದಾರೆ ಎಂಬ ಸಂಭ್ರಮದಿಂದ ಅವರನ್ನು ಜೊತೆಯ ವಿದ್ಯಾರ್ಥಿಗಳೆಲ್ಲ ಸ್ವಾಗತಿಸಿದರು. ಸತ್ಯಾಗ್ರಹಿಗಳು ಜೈಲಿನಲ್ಲಿದ್ದ ಅವಧಿಯಲ್ಲಿ ಅವರ ಮನೆಗಳಿಗೆ ತೆರಳಿ ಅವರ ತಾಯ್ತಂದೆಯರಿಗೆ ಸಾಂತ್ವನ ಹೇಳಿ ಧೈರ್ಯ ತುಂಬುವ ಕೆಲಸವನ್ನೂ ಸ್ನೇಹಿತರು ಮಾಡಿದ್ದರು. ಇನ್ನು ಕೆಲವರು ಅವರಿಗಾಗಿ ನೋಟ್ಸ್ ಬರೆದಿಟ್ಟುಕೊಂಡಿದ್ದರು. ಒಟ್ಟಿನಲ್ಲಿ ಸತ್ಯಾಗ್ರಹಿ ಮಿತ್ರರನ್ನು ಹೀಗಳೆಯುವುದಾಗಲಿ, ಅವರು ಜೈಲಿಗೆ ಹೋಗಿ ಬಂದುದನ್ನು ಧಿಕ್ಕರಿಸುವುದಾಗಲಿ ಎಲ್ಲೂ ಇರಲಿಲ್ಲ.

ಪರೀಕ್ಷೆಗಂತೂ ಎಲ್ಲರೂ ಸಿದ್ಧತೆಮಾಡಿಕೊಳ್ಳುತ್ತಿದ್ದರು. ಇನ್ನು ಸರ್ಕಾರ ಎಲ್ಲಿಯಾದರೂ ಅಡ್ಡಗಾಲು ಹಾಕಬಹುದೇ ಎಂಬ ಸಂಶಯವಂತೂ ಇದ್ದೇ ಇತ್ತು. ಇದನ್ನು ದೃಢಪಡಿಸುವಂತೆ ಎನ್.ಸಿ.ಸಿ. ಕಚೇರಿಯಿಂದ ಒಂದು ಪತ್ರ ಬಂದಿತು. ದೇಶವಿರೋಧಿ ಚಟುವಟಿಕೆಗಳಲ್ಲಿ ತೊಡಗಿರುವುದರಿಂದ ನಿಮ್ಮನ್ನು ಎನ್.ಸಿ.ಸಿ ಯಿಂದ ವಜಾಗೊಳಿಸಲಾಗಿದೆ. ಎನ್.ಸಿ.ಸಿ. ಯಿಂದ ಪಡೆದುಕೊಂಡಿರುವ ನಿಮ್ಮ ಸಮವಸ್ತ್ರ ಮತ್ತಿತರ ವಸ್ತುಗಳನ್ನು ಹಿಂತಿರುಗಿಸತಕ್ಕದ್ದು ಎಂಬುದು ಪತ್ರದ ಸಾರಾಂಶ. ಇದಕ್ಕೇನೂ ಹೆಚ್ಚು ತಲೆಕೆಡಿಸಿಕೊಳ್ಳುವ ಕಾರಣವಿರಲಿಲ್ಲ. ಅನಂತಕುಮಾರ್ ಮತ್ತವರ ಗೆಳೆಯರು ಸಮವಸ್ತ್ರಗಳನ್ನು ಹಿಂತಿರುಗಿಸಿ ಸುಮ್ಮನಾದರು.ಅಷ್ಟರಲ್ಲಿ ಪರೀಕ್ಷಾ ಪ್ರವೇಶಪತ್ರಗಳೂ ಕೈಸೇರಿದವು.

ಆಗ ಆಡಳಿತದಲ್ಲಿದ್ದ ದೇವರಾಜ ಅರಸು ಸರ್ಕಾರ ಈ ವಿದ್ಯಾರ್ಥಿಗಳನ್ನು ಸುಮ್ಮನೆ ಬಿಡಲು ತಯಾರಿರಲಿಲ್ಲ. ಇಡಿಯ ವಿದ್ಯಾರ್ಥಿ ಸಮುದಾಯವನ್ನು ಇಂಥ ಹೋರಾಟಗಳಿಂದ ದೂರವಿಡಲು ಬರಿಯ ಮೂವತ್ತಾರು ದಿನಗಳ ಸೆರೆವಾಸದ ಶಿಕ್ಷೆ ಸಾಕಾಗದು. ಪರೀಕ್ಷೆಗೇ ಕೂರದಂತೆ ಮಾಡಿದರೆ ತಕ್ಕ ಪಾಠವನ್ನು ಕಲಿಸಿದಂತಾಗುವುದಲ್ಲದೆ ಮುಂದೆ ಇಂಥ ಚಳುವಳಿಗಳು ತಲೆಯೆತ್ತದಂತೆ ಮಾಡಬಹುದು ಎಂದು ಸರ್ಕಾರ ಯೋಚಿಸಿತ್ತೇನೋ. ಅನಂತಕುಮಾರರ ಬಳಗವೂ ಸೇರಿ ರಾಜ್ಯದಲ್ಲಿ ಹೀಗೆ ಸತ್ಯಾಗ್ರಹಿಗಳಾಗಿ ಪಾಲ್ಗೊಂಡಿದ್ದ ನೂರಾರು ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಕೂರಲಾಗದಂತೆ ರಸ್ಟಿಕೇಟ್ ಅಂದರೆ ವಿದ್ಯಾರ್ಥಿಯ ಅರ್ಹತೆಯನ್ನು ಅಮಾನತುಮಾಡಿ ಆದೇಶ ಹೊರಡಿಸಿತು.

ಅನಂತಕುಮಾರ ಮತ್ತು ವಾದೀಂದ್ರಾಚಾರ್ಯರು ಪ್ರಥಮ ಪಿ.ಯು.ಸಿ. ಯಲ್ಲಿದ್ದವರು. ಉಳಿದವರು ಬಹುತೇಕ ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳು. ಈಗ ಇವರ್ಯಾರೂ ಪರೀಕ್ಷೆಗೆ ಹಾಜರಾಗುವಂತಿರಲಿಲ್ಲ.

ಈ ಹೊತ್ತಿಗೆ ನರಹರಿ ಫಡಕೆ ಬೆಂಗಳೂರಿಗೆ ಬಂದು ಭೂಗತ ಚಟುವಟಿಕೆ ಮುಂದುವರಿಸಿದ್ದರು. ತಾವೂ ವಕೀಲರೇ ಆಗಿದ್ದುದರಿಂದ ಕೂಡಲೇ ಬೆಂಗಳೂರಿನ ವಕೀಲರನ್ನು ಸಂಪರ್ಕಿಸಿ, ವಿದ್ಯಾರ್ಥಿಗಳ ಪರವಾಗಿ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲು ವಿನಂತಿಸಿಕೊಂಡರು. ಸಂತೋಷದ ವಿಷಯವೆಂದರೆ ವಕೀಲರೆಲ್ಲರೂ ಒಂದು ಪೈಸೆ ಸಂಭಾವನೆಯನ್ನೂ ತೆಗೆದುಕೊಳ್ಳದೆ ವಿದ್ಯಾರ್ಥಿಗಳ ಪರವಾಗಿ ನಿಂತು ಮೊಕದ್ದಮೆ ದಾಖಲುಮಾಡಲು ಅವಶ್ಯವಾದ ಶುಲ್ಕವನ್ನೂ ತುಂಬಿ ಕೇಸ್ ನಡೆಸಲು ಸಜ್ಜಾದರು. ಅನಂತಕುಮಾರ್, ಅಚ್ಯುತಲಿಮಯೆಯವರ ಗುಂಪಿನ ಪರವಾಗಿ ವಕಾಲತ್ತು ವಹಿಸಿದವರು ಹೆಚ್, ಎಸ್, ರಾಮಚಂದ್ರ ಎಂಬ ವಕೀಲರು. ಅಂಗವೈಕಲ್ಯವಿದ್ದ ಈ ಸಜ್ಜನರು ಗಾಂಧಿಬಜಾರಿನಲ್ಲಿ ವಕೀಲವೃತ್ತಿ ಮಾಡಿಕೊಂಡಿದ್ದವರು. ಇವರಂತೆಯೇ ಎಸ್. ಕೃಷ್ಣಯ್ಯ, ಸುಬ್ರಹ್ಮಣ್ಯ ಜೋಯಿಸ್, ಟಿ.ಎಸ್. ರಾಮಚಂದ್ರ, ಎಸ್. ಜಿ.ಭಟ್ ಮೊದಲಾದ ವಕೀಲರು ವಿದ್ಯಾರ್ಥಿಗಳ ಪರ ವಕೀಲರಾಗಿ ವಾದಿಸುತ್ತಿದ್ದರು.

ಹೆಸರಾಂತ ನ್ಯಾಯವಾದಿ ನ್ಯಾಯಾಧೀಶ ವಿ.ಎಸ್. ಮಳೀಮಠ್ ಅವರ ಸಮ್ಮುಖದಲ್ಲಿ ಈ ಪ್ರಕರಣ ವಿಚಾರಣೆಗೆ ಬಂದಿತ್ತು. ಅನಂತಕುಮಾರರಿಗೆ ಸಂಬಂಧಿಸಿದ ಪ್ರಕರಣದ ವಿಚಾರಣೆಯ ಹೊತ್ತಿಗೆ ಫಡಕೆಯವರೂ ನ್ಯಾಯಾಲಯದಲ್ಲಿ ಪ್ರೇಕ್ಷಕರಾಗಿ ಭಾಗವಹಿಸಿದ್ದರು. ಮಳೀಮಠರು ವಕೀಲರನ್ನು ಕೇಳಿದರು.

"ರಾಮಚಂದ್ರ ಅವರೇ, ಈ ವಿದ್ಯಾರ್ಥಿಗಳು ಏನು ಘೋಷಣೆ ಕೂಗಿದರು?" "ಇಂದಿರಾಗಾಂಧಿ ಮುರ್ದಾಬಾದ್. ಎಮರ್ಜೆನ್ಸಿಗೆ ಧಿಕ್ಕಾರ ಎಂದು ಕೂಗಿದರು" ಎಂಬ ಉತ್ತರ ಬಂದಿತು.

"ಇದರಲ್ಲಿ ದೇಶದ್ರೋಹ ಏನು ಬಂತು? ಇಂದಿರಾ ಈಸ್ ನಾಟ್ ಇಂಡಿಯಾ. ಇಂದಿರಾಗಾಂಧಿ ವಿರುದ್ಧ ಘೋಷಣೆ ಕೂಗಿದ್ದಕ್ಕೆ ಪರೀಕ್ಷೆಗೆ ಕುಳಿತುಕೊಳ್ಳಲಾಗದ ಹಾಗೆ ಪ್ರತಿಬಂಧ ವಿಧಿಸುವುದು ಸರಿಯೇ? ಇದಕ್ಕೆ ತಡೆಯಾಜ್ಞೆ ಕೊಟ್ಟಿದ್ದೇನೆ. ಎಲ್ಲ ವಿದ್ಯಾರ್ಥಿಗಳೂ ಪರೀಕ್ಷೆ ತೆಗೆದುಕೊಳ್ಳಬಹುದು." ಎಂದು ನ್ಯಾಯಾಧೀಶರು ಅಪ್ಪಣೆ ಕೊಡಿಸಿದರು.

ಈ ಸತ್ಯಾಗ್ರಹಿ ಹುಡುಗರಲ್ಲಿ ಅನಂತಕುಮಾರ್ ಮತ್ತು ವಾದೀಂದ್ರ ಇಬ್ಬರೇ ಮೊದಲ ಪಿಯುಸಿ ತರಗತಿಯವರು. ಅವರಿಗೆ ಪರೀಕ್ಷೆಗೆ ಹಾಜರಾಗಲು ನ್ಯಾಯಾಲಯವು ಅನುಮತಿಕೊಡುವ ಹೊತ್ತಿಗೆ ಪ್ರಥಮ ಪಿಯುಸಿ ಪರೀಕ್ಷೆಗಳು ಮುಗಿದೇ ಹೋಗಿದ್ದವು. ಇವರಿಬ್ಬರಿಗೆಂದೇ ಪ್ರತ್ಯೇಕವಾಗಿ ಪರೀಕ್ಷೆ ನಡೆಸಲಾಯಿತು.

ಪುಟ 4 ರಲ್ಲಿ ಮುಂದುವರಿದಿದೆ

ಪುಟ 1 ರಿಂದ

# ತಂದೆ—ಮಗನಂತಿದ್ದ ವಿಶಿಷ್ಟ ಬಾಂಧವ್ಯ

ಆದರೆ, ಅಟಲ್ ಜೀಯವರ ಜನ್ಮದಿನವಾದ ಡಿಸೆಂಬರ್ 25ರಂದು ಅವರ ಮನೆಗೆ ಹೋಗಿ ಶುಭಾಶಯ ಕೋರವುದನ್ನು ಅನಂತಕುಮಾರ್ ಎಂದಿಗೂ ಮರೆಯುತ್ತಿರಲಿಲ್ಲ. ಇಂಥ ಸಂದರ್ಭಗಳಲ್ಲಿ ಎಷ್ಟೋ ಬಾರಿ ಅನಂತಕುಮಾರ್ ಅವರ ಜತೆ ಅವರ ಪತ್ನಿ ತೇಜಸ್ವಿನಿ ಅನಂತಕುಮಾರ್ ಅವರು ಅಟಲ್ ಜೀ ಮನೆಗೆ ತೆರಳಿ ಶುಭಾಶಯ ಕೋರುತ್ತಿದ್ದರು.

**ಎಲ್ಲ ಖಾತೆಗಳ ಯಶಸ್ವಿ ನಿರ್ವಹಣೆ:**

ಅಟಲ್ ಜೀಯವರ 13 ದಿನಗಳ ಸರ್ಕಾರದ ನಂತರ ಕೇಂದ್ರದಲ್ಲಿ 13 ತಿಂಗಳ ಸರ್ಕಾರ ಅಸ್ತಿತ್ವಕ್ಕೆ ಬಂದಿದ್ದು 1996ರಲ್ಲಿ. ಆಗ ಅಟಲ್ ಜೀ ಮತ್ತು ಆಡ್ವಾಣಿಯವರ ನಂತರ ಮೂರನೇಯವರಾಗಿ ಅನಂತಕುಮಾರ್ ಪ್ರಮಾಣವಚನ ಸ್ವೀಕರಿಸಿದ್ದು ಅವಿಸ್ಮರಣೀಯ ಸಂದರ್ಭ. ಪ್ರಮಾಣವಚನ ಸಮಾರಂಭದ ಬಳಿಕ ಕಚೇರಿಯಲ್ಲಿ ಅಟಲ್ ಜೀ ನಗುತ್ತಲೇ ಅನಂತಕುಮಾರ್ ಅವರನ್ನು, "ಕೌನ್ ಸಾ ಮಂತ್ರಾಲಯ ಚಾಹಿಯೇ?' (ಯಾವ ಖಾತೆ ಬೇಕು) ಎಂದು ಕೇಳಿದರು. ಆಗ ಇವರ ಉತ್ತರ "ಕೃಷಿ ಸಚಿವನಾಗಿ ಕಾರ್ಯನಿರ್ವಹಿಸಲು ಇಷ್ಟಪಡುತ್ತೇನೆ" ಎಂಬುದಾಗಿತ್ತು. ಬೆಂಗಳೂರಿನ ಸಂಸದರಾಗಿ ಕೃಷಿ ಖಾತೆ ಏನು ಮಾಡುತ್ತೀರಿ ಅಂದವರೇ ಅಲ್ಲೇ ಇದ್ದ ವಿಮಾನದ ಪ್ರತಿಕೃತಿಯನ್ನು ಅನಂತಕುಮಾರ್ ಅವರ ಕೈಗೆ ಇತ್ತ ಅಟಲ್ ಜೀ "ಇದನ್ನು ತೆಗೆದುಕೊಂಡು ಹೋಗಿ" ಎಂದರು. ಅದಾದ ಸ್ವಲ್ಪ ಹೊತ್ತಿನಲ್ಲೇ ಖಾತೆ ಹಂಚಿಕೆಯ ಸುದ್ದಿ ಹೊರಬಂತು. ಮತ್ತು ಅನಂತಕುಮಾರ್ ಅವರು ಕೇಂದ್ರ ನಾಗರಿಕ ವಿಮಾನಯಾನ ಸಚಿವರಾದರು. ಆ ಬಳಿಕ ಅನಂತಕುಮಾರ್ ಅದೆಷ್ಟು ವೇಗವಾಗಿ ಕೆಲಸ ಮಾಡಿದರು ಎಂದರೆ ವಿಮಾನಯಾನ ರಂಗದ ಮೂರು ಪ್ರಮುಖ ಕಾರ್ಯಕ್ರಮಗಳಿಗೆ ಮುಖ್ಯ ಅತಿಥಿಯಾಗಿ ಅಟಲ್ ಜೀ ಬೆಂಗಳೂರಿಗೆ ಬಂದಿದ್ದರು. ಪ್ರತೀ ಕಾರ್ಯಕ್ರಮವನ್ನೂ ಅಚ್ಚುಕಟ್ಟಾಗಿ, ಅಷ್ಟೇ ಯಶಸ್ವಿಯಾಗಿ ಆಯೋಜಿಸುವುದು ಅನಂತಕುಮಾರ್ ಅವರಿಗೆ ಇಷ್ಟವಾದ ಕೆಲಸವಾಗಿತ್ತು. ಕೆಲ ಸಮಯ ಗ್ರಾಮೀಣಾಭಿವೃದ್ಧಿ ಸಚಿವರಾಗಿಯೂ ಕಾರ್ಯನಿರ್ವಹಿಸಿದರು. ಅಲ್ಲದೆ, ದೇಶದ ಸಂಸ್ಕೃತಿ ಸಚಿವರಾಗಿ ಕಾರ್ಯನಿರ್ವಹಿಸಿದ ಅವಧಿಯಲ್ಲಂತೂ ರಾಷ್ಟ್ರಕ್ಕೆ ಹಲವು ಕೊಡುಗೆಗಳನ್ನು ನೀಡಿದರು.

**ಮೆಟ್ರೋ ಕನಸು ಸಾಕಾರ:**

ಅಟಲ್ ಜೀಯವರ ಮುಂದಿನ ಸರ್ಕಾರದಲ್ಲಿ ನಗರಾಭಿವೃದ್ಧಿ ಸಚಿವರಾದರು. ರಾಜಧಾನಿ ದೆಹಲಿಯಲ್ಲಿ ಮೆಟ್ರೋ ಉದ್ಘಾಟನೆಗೊಂಡಿತು. ಅದರ ಮೊದಲ ಪ್ರಯಾಣದಲ್ಲಿ ಅಟಲ್ ಜೀ, ಅನಂತಕುಮಾರ್ ಮತ್ತು ದೆಹಲಿಯ ಆಗಿನ ಮುಖ್ಯಮಂತ್ರಿಯಾಗಿದ್ದ ಶೀಲಾ ದೀಕ್ಷಿತ್ ಪಾಲ್ಗೊಂಡಿದ್ದರು. ಬೆಂಗಳೂರಿಗೂ ಮೆಟ್ರೋ ತರಬೇಕು ಎಂಬ ಕನಸು ಇದೇ ಸಂದರ್ಭದಲ್ಲಿ ಚಿಗುರೊಡೆಯಿತು. ಮಾತ್ರವಲ್ಲ, 20 ಲಕ್ಷಕ್ಕಿಂತ ಅಧಿಕ ಜನಸಂಖ್ಯೆ ಇರುವ ನಗರಗಳಿಗೆ ಮೆಟ್ರೋ ಬರಬೇಕು ಎಂದು ಬಲವಾಗಿ ಪ್ರತಿಪಾದಿಸಿದರು. ಮೆಟ್ರೋ ಭಾರತದಲ್ಲೇ ನಿರ್ಮಾಣವಾಗುತ್ತದೆ, ಇಲ್ಲಿಯವರಿಗೆ ಉದ್ಯೋಗ ಸಿಗುತ್ತದೆ, ಸಮೂಹ ಸಾರಿಗೆಯಾಗಿ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ ಎಂದು ಹೇಳಿದ ಅನಂತಕುಮಾರ್ ಅವರು ದೇಶದಲ್ಲಿ ಮೆಟ್ರೊ ಜಾಲ ಆರಂಭಕ್ಕೆ ಮತ್ತು ವಿಸ್ತಾರಕ್ಕೆ ಕಾರಣೀಭೂತರಾದರು. ಅಟಲ್ ಜೀ ಮತ್ತು ಅನಂತಕುಮಾರ್ ಅವರ ಜೋಡಿ ನಗರಾಭಿವೃದ್ಧಿಗೆ ಹೊಸ ಮೆರುಗನ್ನೇ ನೀಡಿತು ಎಂಬುದನ್ನು ಹಲವಾರು ರಾಜಕೀಯ ನಾಯಕರು ಪಕ್ಷಾತೀತವಾಗಿ ಒಪ್ಪಿಕೊಂಡು, ಶ್ಲಾಘಿಸಿದ ನಿದರ್ಶನಗಳಿವೆ. ಅಲ್ಲದೆ, ಅನಂತಕುಮಾರ್ ಅವರು ನಗರಾಭಿವೃದ್ಧಿ ಸಚಿವರಾಗಿದ್ದಾಗ ಬೆಂಗಳೂರಿಗೆ 1 ಸಾವಿರ ಕೋಟಿ ರೂಪಾಯಿ ಅನುದಾನ ದೊರೆತಿದ್ದು ದಾಖಲೆಯೇ ಸರಿ. ಇದರಿಂದ ಬೆಂಗಳೂರಿನ ಮೂಲಸೌಕರ್ಯಗಳು ಅಭಿವೃದ್ಧಿಗೊಂಡವು. ರಸ್ತೆ, ಫ್ಲೈಓವರ್, ಸಾರ್ವಜನಿಕ ಶೌಚಗೃಹಗಳ ನಿರ್ಮಾಣ ಕಾರ್ಯಗಳು ಭರದಿಂದ ನಡೆದವು.

**ಕಾವೇರಿ ಸಮಸ್ಯೆಗೆ ಪರಹಾರ:**

ಕರ್ನಾಟಕ ಮತ್ತು ತಮಿಳುನಾಡು ನಡುವೆ ಕಾವೇರಿ ನದಿ ನೀರಿನ ಸಮಸ್ಯೆ ಹಲವು ದಶಕಗಳಿಂದ ಇತ್ತು. ಅಟಲ್ ಜೀ ನೇತೃತ್ವದಲ್ಲಿ ಕಾವೇರಿ ಸಮಸ್ಯೆಗೆ ತಾರ್ಕಿಕ ಪರಿಹಾರ ಒದಗಿಸಲು ದಿಟ್ಟ ಹೆಜ್ಜೆಗಳನ್ನು ಇರಿಸಲಾಯಿತು. ಆಗ ಸ್ವತಃ ಎಸ್.ಎಂ.ಕೃಷ್ಣ ಅವರು "ಅನಂತಕುಮಾರ್ ಅವರು ಕರ್ನಾಟಕದ ಆಪದ್ಭಾಂದವ' ಎಂದು ಶ್ಲಾಘಿಸಿದ್ದರು.



**ಅನಾರೋಗ್ಯ ಲೆಕ್ಕಿಸದೆ ತೆರಳಿದರು**

ಅಟಲ್ ಬಿಹಾರಿ ವಾಜಪೇಯಿ ಅವರು 2018ರ ಆಗಸ್ಟ್ 16ರಂದು ಇಹಲೋಕ ತ್ಯಜಿಸಿದರು. ಆ ಸಂದರ್ಭದಲ್ಲಿ ಅನಂತಕುಮಾರ್ ಅವರಿಗೆ ತೀವ್ರ ಅನಾರೋಗ್ಯ. ಆದರೆ, ಅಟಲ್ ಜೀ ನಿಧನದ ಸುದ್ದಿ ಕೇಳುತ್ತಿದ್ದಂತೆ ಅನಾರೋಗ್ಯ ಲೆಕ್ಕಿಸದೆ ಆಸ್ಪತ್ರೆಯಿಂದಲೇ ದೆಹಲಿಗೆ ತೆರಳಿದರು. ಮಾತ್ರವಲ್ಲ, ಅಟಲ್ ಜೀ ಅಂತಿಮಸಂಸ್ಕಾರದ ವೇಳೆ ಅಗತ್ಯ ಸಲಹೆ ಮತ್ತು ಸಹಕಾರವನ್ನು ನೀಡಿದರು. ಅಟಲ್ ಜೀಯವರ ಶ್ರದ್ಧಾಂಜಲಿ ಸಭೆಯಲ್ಲಿ ಸರ್ವಪಕ್ಷಗಳ ನಾಯಕರು ಭಾಗವಹಿಸಿ, ಮಾತನಾಡಬೇಕು ಎಂಬುದು ಅನಂತಕುಮಾರ್ ಅವರ ಇಚ್ಛೆಯಾಗಿತ್ತು. ಅದರಂತೆ, ಶ್ರದ್ಧಾಂಜಲಿ ಸಭೆ ಆಯೋಜನೆಯ ಜವಾಬ್ದಾರಿಯನ್ನು ನರೇಂದ್ರ ಮೋದಿಯವರು ಅನಂತಕುಮಾರ್ ಅವರಿಗೆ ವಹಿಸಿದರು. ಅನಾರೋಗ್ಯದ ನಡುವೆಯೂ ಶ್ರದ್ಧಾಂಜಲಿ ಸಭೆಯನ್ನು ಆಯೋಜಿಸಿದರು. ಮತ್ತು ಆ ಬಳಿಕ ದೆಹಲಿಯ ಕನ್ನಡ ಸಂಘದಲ್ಲಿ ನಡೆದ ಅಟಲ್ ಜೀಯವರ ಶ್ರದ್ಧಾಂಜಲಿ ಸಭೆಯಲ್ಲಿ ಅನಂತಕುಮಾರ್ ಅವರು ಮಾತನಾಡಿದರು ಮತ್ತು ಇದು ಅನಂತಕುಮಾರ್ ಅವರು ಪಾಲ್ಗೊಂಡ ಕೊನೆಯ ಸಾರ್ವಜನಿಕ ಕಾರ್ಯಕ್ರಮವಾಗಿತ್ತು. ಶ್ರೀರಂಗಪಟ್ಟಣದಲ್ಲಿ ಅಟಲ್ ಜೀಯವರ ಅಸ್ಥಿ ವಿಸರ್ಜನೆಯನ್ನು ಮಾಡಿ, ತಮ್ಮ ಕರ್ತವ್ಯ ಮುಗಿಯಿತು ಎಂಬಂತೆ ಅನಂತಕುಮಾರ್ ಅವರು ನಿರಾಳರಾದರು.

**ಬಿಕ್ಕಿ ಬಿಕ್ಕಿ ಅತ್ತರು!**

ಅಟಲ್ ಜೀ ಎಂದರೆ ಅನಂತಕುಮಾರ್ ಅವರಿಗೆ ಅತೀವ ಪ್ರೀತಿ ಮತ್ತು ಗೌರವ. ಅಟಲ್ ಜೀ ನಿಧನದ ಬಳಿಕ ವಾಜಪೇಯಿ ಅವರ ವಿಶಿಷ್ಟ ವ್ಯಕ್ತಿತ್ವ, ಕಾರ್ಯ, ಸಾಧನೆಗಳ ಕುರಿತಂತೆ ಹಲವು ಸಂದರ್ಶನಗಳನ್ನು ನೀಡಿದ್ದರು ಅನಂತಕುಮಾರ್. ಈ ಸಂದರ್ಶನದ ಹೊತ್ತಲ್ಲಿ ತುಂಬ ಭಾವುಕರಾಗಿದ್ದರು ಮತ್ತೆ ಒಮ್ಮೆಯಂತೂ ಮಗುವಿನಂತೆ ಬಿಕ್ಕಿ ಬಿಕ್ಕಿ ಅತ್ತರು.

◆

ಪುಟ 3 ರಿಂದ

ಭೂಗತ ಹೋರಾಟ, ಸತ್ಯಾಗ್ರಹ ಮತ್ತು ಸೆರೆವಾಸಗಳ ದೆಸೆಯಿಂದ ಅನಂತಕುಮಾರ್ ಸರಿಯಾಗಿ ವ್ಯಾಸಂಗ ಮಾಡಲು ಸಾಧ್ಯವಾಗಿರಲಿಲ್ಲ. ಉಳಿದೆಲ್ಲ ವಿಷಯಗಳಲ್ಲಿ ತೇರ್ಗಡೆಹೊಂದಿದರೂ ಗಣಿತ ವಿಷಯದಲ್ಲಿ ಉತ್ತೀರ್ಣನಾಗಲಿಲ್ಲ. ಮುಂದಿನ ತರಗತಿಗೇನೋ ಹೋಗುವುದಕ್ಕೆ ಅಡ್ಡಿಯಿರಲಿಲ್ಲ. ಮೊದಲ ವರ್ಷದಲ್ಲಿ ಫೇಲಾದ ವಿಷಯವನ್ನು ಪೂರಕ ಪರೀಕ್ಷೆ ಬರೆದು ತೇರ್ಗಡೆ ಹೊಂದುವುದಕ್ಕೆ ಅವಕಾಶವಿತ್ತು. ಗಣಿತ ಶಾಸ್ತ್ರದ ಪ್ರಾಧ್ಯಾಪಕರೂ ಆಗಿದ್ದ ಪ್ರಾಂಶುಪಾಲ ಶ್ರೀ ಬೆಲ್ಲದ ಅವರು ಅನಂತಕುಮಾರರನ್ನು ಕರೆದು ಅವರು ನಪಾಸಾಗಿದ್ದ ಗಣಿತ ವಿಷಯವನ್ನು ತಾವು ಹೇಳಿ ಕೊಡುವುದಾಗಿಯೂ ಪರೀಕ್ಷೆಗೆ ತಕ್ಕ ಸಿದ್ಧತೆ ಮಾಡಿಕೊಳ್ಳಬೇಕೆಂದೂ ಸಲಹೆ ಕೊಟ್ಟರು. ಅನಂತಕುಮಾರ್ ತಾನೇ ಗಮನವಿಟ್ಟು ಅಭ್ಯಾಸಮಾಡಿ ಪೂರಕ ಪರೀಕ್ಷೆಯಲ್ಲಿ ಉತ್ತೀರ್ಣರಾದರು.

ಪರೀಕ್ಷೆಗೆ ಕೂರದಂತೆ ಸರ್ಕಾರ ಮಾಡಿದ್ದ ಆದೇಶವನ್ನು ರದ್ದುಮಾಡಿದ ಉಚ್ಚ ನ್ಯಾಯಾಲಯವು ವಿದ್ಯಾರ್ಥಿಗಳನ್ನು ಮುಂದೆ ವಿದ್ಯಾಭ್ಯಾಸ ಮಾಡಲಾಗದಂತೆ ಅಮಾನತು ಮಾಡಿದ ಆದೇಶವನ್ನೂ ರದ್ದುಪಡಿಸಿತ್ತು. ಹೀಗಾಗಿ ಸತ್ಯಾಗ್ರಹಿಗಳ ಮುಂದಿನ ವಿದ್ಯಾಭ್ಯಾಸಕ್ಕಿದ್ದ ಆತಂಕವೂ ದೂರವಾಯಿತು.

# ಕೃತಕ ಬುದ್ಧಿಮತ್ತೆ: “ಭವಿಷ್ಯದ ಆರೋಗ್ಯ ಕ್ರಾಂತಿ”

ಅನಂತಕುಮಾರ್ ಪ್ರತಿಷ್ಠಾನವು ಆಯೋಜಿಸಿದ್ದ ‘ದೇಶ ಮೊದಲು ಸಂವಾದ’ ಕಾರ್ಯಕ್ರಮದ 14ನೇ ಆವೃತ್ತಿಯು ಆಗಸ್ಟ್ 02ರಂದು ಯಶಸ್ವಿಯಾಗಿ ಜರುಗಿತು. ‘ವೈದ್ಯಕೀಯದ ಭವಿಷ್ಯ - ರೋಗ ತಡೆಗಟ್ಟುವಿಕೆಯಿಂದ ಚಿಕಿತ್ಸೆಯವರೆಗೆ: ಭವಿಷ್ಯದ ಆರೋಗ್ಯ ಸೇವೆಯಲ್ಲಿ ಕೃತಕ ಬುದ್ಧಿಮತ್ತೆ, ಐಒಟಿ ಮತ್ತು ಇ-ಸಾಧನಗಳು’ ಎಂಬ ಶೀರ್ಷಿಕೆಯಡಿ ನಡೆದ ಈ ವೆಬಿನಾರ್‌ನಲ್ಲಿ, ತಂತ್ರಜ್ಞಾನದ ಬಳಕೆಯಿಂದ ಆರೋಗ್ಯ ಕ್ಷೇತ್ರವು ಹೇಗೆ ಕ್ರಾಂತಿಕಾರಕ ಬದಲಾವಣೆಗಳನ್ನು ಹೊಂದುತ್ತಿದೆ ಎಂಬುದರ ಕುರಿತು ಮಹತ್ವದ ಚರ್ಚೆಗಳು ನಡೆದವು. .

ಈ ವೆಬಿನಾರ್‌ನಲ್ಲಿ ವಿಷಯ ತಜ್ಞರಾಗಿ, ಐಐಟಿ ಖರಗ್‌ಪುರದ ಮಾಜಿ ನಿರ್ದೇಶಕರಾದ ಪ್ರೊ. ಪಾರ್ಥ ಪ್ರತೀಮ್ ಚಕ್ರವರ್ತಿ ಮತ್ತು ಕ್ಯಾನ್ಸರ್ ಟ್ರೀಟ್‌ಮೆಂಟ್ ಸರ್ವೀಸಸ್ ಇಂಟರ್‌ನ್ಯಾಷನಲ್‌ನ ಅಧ್ಯಕ್ಷರಾದ ಶ್ರೀ ದಿಲೀಪ್ ಮಂಗ್ಸೂಳಿ ಭಾಗವಹಿಸಿದ್ದರು. ಇಬ್ಬರು ತಜ್ಞರೂ ತಮ್ಮ ಅಮೂಲ್ಯ ವಿಚಾರಗಳನ್ನು ಹಂಚಿಕೊಂಡರು.

ಕಾರ್ಯಕ್ರಮದಲ್ಲಿ, ಕೃತಕ ಬುದ್ಧಿಮತ್ತೆ (AI), ಇಂಟರ್ನೆಟ್ ಆಫ್ ಥಿಂಗ್ಸ್ (IoT), ಮತ್ತು ನೂತನ ಸಾಧನಗಳ (eDevices) ಸಂಯೋಜಿತ ಬಳಕೆಯಿಂದ ರೋಗಗಳನ್ನು ಹೇಗೆ ಪರಿಣಾಮಕಾರಿಯಾಗಿ ತಡೆಗಟ್ಟಬಹುದು, ವೇಗವಾಗಿ ಪತ್ತೆಹಚ್ಚಬಹುದು ಮತ್ತು ಹೆಚ್ಚು ನಿಖರವಾಗಿ ಚಿಕಿತ್ಸೆ ನೀಡಬಹುದು ಎಂಬುದರ ಬಗ್ಗೆ ವಿವರವಾದ ಚರ್ಚೆ ನಡೆಯಿತು. ಈ ತಂತ್ರಜ್ಞಾನಗಳು ಭವಿಷ್ಯದಲ್ಲಿ ಆರೋಗ್ಯ ಸೇವೆಗಳನ್ನು ಹೆಚ್ಚು ವೈಯಕ್ತಿಕ ಮತ್ತು ಸುಲಭವಾಗಿ ಲಭ್ಯವಾಗುವಂತೆ ಮಾಡುತ್ತವೆ ಎಂದು ತಜ್ಞರು ವಿವರವಾಗಿ ತಿಳಿಸಿದರು. ಭಾರತದಂತಹ ದೇಶಕ್ಕೆ ಈ ತಂತ್ರಜ್ಞಾನಗಳು ವಿಶೇಷವಾಗಿ ಪ್ರಯೋಜನಕಾರಿ ಎಂದು ತಜ್ಞರು ಅಭಿಪ್ರಾಯಪಟ್ಟರು.





ಕಡಿಮೆ ವೆಚ್ಚದಲ್ಲಿ ದೂರದ ಪ್ರದೇಶಗಳಿಗೂ ಗುಣಮಟ್ಟದ ಆರೋಗ್ಯ ಸೇವೆಯನ್ನು ತಲುಪಿಸಲು AI, IoT ಮತ್ತು ನೂತನ ಸಾಧನಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದು ಅವರು ಹೇಳಿದರು. ಒಟ್ಟಾರೆಯಾಗಿ, ಈ ವೆಬಿನಾರ್ ಭವಿಷ್ಯದ ಆರೋಗ್ಯ ರಕ್ಷಣೆಯ ಕುರಿತು ಸಮಗ್ರ ಮತ್ತು ಪ್ರಬುದ್ಧ ಚರ್ಚೆಗೆ ವೇದಿಕೆ ಒದಗಿಸಿತು.

ಕಾರ್ಯಕ್ರಮದಲ್ಲಿ ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ. ಪಿ. ವಿ. ಕೃಷ್ಣಭಟ್ಟ, ಅದಮ್ಯ ಚೇತನದ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಹಾಗೂ ವಿವಿಧ ವಿಶ್ವವಿದ್ಯಾಲಯಗಳ ಅಧ್ಯಾಪಕರು ಸಿಬ್ಬಂದಿವರ್ಗ, ವಿದ್ಯಾರ್ಥಿಗಳು, ಹಾಗೂ ಮತ್ತಿತರು ಭಾಗವಹಿಸಿದ್ದರು.

## ಕೃತಕ ಬುದ್ಧಿಮತ್ತೆ: ಆಧುನಿಕ ಜಗತ್ತಿನ ತಾರೆ

**(ಈ ವೆಬಿನಾರ್‌ನಲ್ಲಿ ವಿಷಯ ತಜ್ಞರಾಗಿ, ಐಐಟಿ ಖರಗ್‌ಪುರದ ಮಾಜಿ ನಿರ್ದೇಶಕರಾದ ಪ್ರೊ. ಪಾರ್ಥ ಪ್ರತೀಮ್ ಚಕ್ರವರ್ತಿಯವರ ಉಪನ್ಯಾಸದ ಲೇಖನ ರೂಪ )**

ಕೃತಕ ಬುದ್ಧಿಮತ್ತೆ ಕೇವಲ ಒಂದು ತಂತ್ರಜ್ಞಾನವಲ್ಲ, ಅದು ವಿಜ್ಞಾನ, ಕಲಿಕೆ ಮತ್ತು ಸಮಸ್ಯೆಯನ್ನು ಪರಿಹರಿಸುವ ಕಲೆಯ ಸಂಯೋಜನೆ. ಹಿಂದೆ ನಾವು ಪ್ರತ್ಯೇಕವಾಗಿ ಅಧ್ಯಯನ ಮಾಡುತ್ತಿದ್ದ ವಿಷಯಗಳನ್ನು AI ಒಂದೇ ವೇದಿಕೆಯಲ್ಲಿ ಒಗ್ಗೂಡಿಸಿದೆ. ಇದು ಕೇವಲ ಸಂಕೀರ್ಣವಾದ ಗಣಿತಶಾಸ್ತ್ರ ಮತ್ತು ದತ್ತಾಂಶ ವಿಶ್ಲೇಷಣೆಯಲ್ಲ. ಇದು ಭೌತಶಾಸ್ತ್ರದ ಸವಾಲುಗಳನ್ನು ಅರ್ಥಮಾಡಿಕೊಳ್ಳಲು ಒಂದು ಶಿಶುಗೀತೆಯಂತೆ ಸರಳ ಮತ್ತು ಪರಿಣಾಮಕಾರಿ.



AI ಯ ಶಕ್ತಿಯು ಜ್ಞಾನ, ಪರಿಹಾರ ಮತ್ತು ಕಲಿಕೆಯ ತ್ರಿಕೋನದ ಮೇಲೆ ನಿಂತಿದೆ. ಇದು ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ ಮತ್ತು ಭಾಷೆಯಂತಹ ಎಲ್ಲ ಜ್ಞಾನಗಳನ್ನು ಒಂದೇ ಚೌಕಟ್ಟಿನಲ್ಲಿ ವಿಶ್ಲೇಷಿಸುತ್ತದೆ. ಡೇಟಾ ಸೈನ್ಸ್, ಡೀಪ್ ಲರ್ನಿಂಗ್ ಮತ್ತು ಅಲ್ಗಾರಿದಮಿಕ್ ತಂತ್ರಜ್ಞಾನಗಳು ಇದರ ಹಿಂದಿರುವ ಶಕ್ತಿಗಳು. ಆದಾಗ್ಯೂ, AI ನೀಡುವ ಪರಿಹಾರಗಳು ಕೆಲವೊಮ್ಮೆ ತಪ್ಪುಗಳನ್ನೂ ಒಳಗೊಂಡಿರಬಹುದು. ಆದ್ದರಿಂದ, ಆರೋಗ್ಯ ರಕ್ಷಣೆಯಂತಹ ಸೂಕ್ಷ್ಮ ಕ್ಷೇತ್ರಗಳಲ್ಲಿ ಇದನ್ನು ಬಹಳ ಎಚ್ಚರಿಕೆಯಿಂದ ಮತ್ತು ಜವಾಬ್ದಾರಿಯಿಂದ ಬಳಸಬೇಕಾಗುತ್ತದೆ.

### ಆರೋಗ್ಯ ರಕ್ಷಣೆಯಲ್ಲಿ AI ಕ್ರಾಂತಿ



AI ಆರೋಗ್ಯ ರಕ್ಷಣೆಯ ಪ್ರತಿಯೊಂದು ಹಂತದಲ್ಲೂ ಕ್ರಾಂತಿಕಾರಿ ಬದಲಾವಣೆ ತಂದಿದೆ. ರೋಗ ಪತ್ತೆ, ರೋಗನಿರ್ಣಯ, ಚಿಕಿತ್ಸೆ, ಔಷಧ ಮತ್ತು ಲಸಿಕೆಗಳ ಆವಿಷ್ಕಾರ, ರೋಗಿಗಳ ನಿರ್ವಹಣೆ ಮತ್ತು ಆರೋಗ್ಯ ನೀತಿ ರೂಪಿಸುವಿಕೆಯಲ್ಲಿ ಇದರ ಪಾತ್ರ ಮಹತ್ವದ್ದು. ಕೋವಿಡ್-19 ಸಾಂಕ್ರಾಮಿಕವು AI ತಂತ್ರಜ್ಞಾನಗಳ ಅಭಿವೃದ್ಧಿಗೆ ದೊಡ್ಡ ವೇಗವನ್ನು ನೀಡಿತು. ಉದಾಹರಣೆಗೆ, ಕೋವಿಡ್ ಪರೀಕ್ಷೆಗಳನ್ನು ವ್ಯಾಪಕವಾಗಿ ಮಾಡಲು ಸಾಧ್ಯವಾಗದಿದ್ದಾಗ, AI ಆಧಾರಿತ ಸ್ಕ್ರೀನಿಂಗ್ ಪರಿಕರಗಳು ಮತ್ತು ಒಂದೇ PCR ಮಾದರಿಯಲ್ಲಿ ಎಂಟು ಪರೀಕ್ಷೆಗಳನ್ನು ನಡೆಸುವ ತಂತ್ರಜ್ಞಾನಗಳು ಬಹಳ ಉಪಯುಕ್ತವಾದವು.

IoT (ಇಂಟರ್ನೆಟ್ ಆಫ್ ಥಿಂಗ್ಸ್) ನೊಂದಿಗೆ ಸಂಯೋಜನೆಗೊಂಡ AI, ಸೋಂಕು ಪತ್ತೆ ಹಚ್ಚುವ ಸ್ಮಾರ್ಟ್ ಮಾಸ್ಕ್‌ಗಳು ಮತ್ತು ಕೆಮ್ಮು ಗುರುತಿಸುವ ಡಿಟೆಕ್ಟರ್‌ಗಳನ್ನು ಅಭಿವೃದ್ಧಿಪಡಿಸಲು ಸಹಕರಿಸಿದೆ. ಇದೇ ರೀತಿಯಲ್ಲಿ, ಬೆಂಗಳೂರಿನ ವಿದ್ಯಾರ್ಥಿಯೊಬ್ಬರು ಅಗ್ಗದ ಡಿಜಿಟಲ್ ಮೈಕ್ರೋಸ್ಕೋಪಿ ಸಾಧನವನ್ನು ಅಭಿವೃದ್ಧಿಪಡಿಸಿದ್ದಾರೆ, ಇದು ದುಬಾರಿ ಯಂತ್ರಗಳಷ್ಟೇ ನಿಖರತೆಯನ್ನು ನೀಡುತ್ತದೆ. ಕಣ್ಣಿನ ರೋಗಗಳ ರೋಗನಿರ್ಣಯದಲ್ಲಿ AI ಮಾನವ ತಜ್ಞರನ್ನು ಮೀರಿಸುವ ನಿಖರತೆಯನ್ನು ತೋರಿಸಿದೆ.

### ಔಷಧ ಆವಿಷ್ಕಾರ ಮತ್ತು ಲಸಿಕೆ ನಿರ್ವಹಣೆ

AI ಯು ಔಷಧ ಆವಿಷ್ಕಾರದ ಪ್ರಕ್ರಿಯೆಯನ್ನು ಗಣನೀಯವಾಗಿ ವೇಗಗೊಳಿಸಿದೆ. ಇದು ಹೊಸ ಔಷಧ ಅಣುಗಳನ್ನು ಅವುಗಳ ಪರಿಣಾಮಕಾರಿತ್ವ ಮತ್ತು ಸುರಕ್ಷತೆಯ ಆಧಾರದ ಮೇಲೆ ಮೌಲ್ಯಮಾಪನ ಮಾಡುತ್ತದೆ. ಕೋವಿಡ್-19 ಸಾಂಕ್ರಾಮಿಕದ ಸಂದರ್ಭದಲ್ಲಿ, ಅಸ್ತಿತ್ವದಲ್ಲಿರುವ ಔಷಧಗಳನ್ನು ಮರುಬಳಕೆ ಮಾಡುವ ಮೂಲಕ ಚಿಕಿತ್ಸೆಗಳನ್ನು ಕಂಡುಹಿಡಿಯಲು AI ನೆರವಾಗಿದೆ.

ಪುಟ 9 ರಲ್ಲಿ ಮುಂದುವರಿದಿದೆ

# ಚಿಣ್ಣರ ಚೇತನ

ಓ ನನ್ನ ಚೇತನ ಆಗು ನೀ ಅನಿಕೇತನ



ಯಾವುದೇ ತರಗತಿಯಾದರೂ ಒಂದಿಷ್ಟು ವಿದ್ಯಾರ್ಥಿಗಳು ಹಿಂದಿನ ಬೆಂಚ್‌ನಲ್ಲಿ ಕೂರಲೇಬೇಕಾಗುತ್ತದೆ. ಬಹಳಷ್ಟು ಸಂದರ್ಭಗಳಲ್ಲಿ ಅವರನ್ನು ದಡ್ಡರೆಂದೋ, ತುಂಟರೆಂದೋ ಹಂಗಿಸುವ, ಲೇವಡಿ ಮಾಡುವವರೂ ಇರುತ್ತಾರೆ. ಕ್ಲಾಸಿನಲ್ಲಿ ಮುಂದೆ ಕೂರುವವರು ಜಾಣರೆಂದೂ ಪರಿಶ್ರಮಿಗಳೆಂದೂ ಕೊಂಡಾಡುತ್ತಾರೆ. ಹಾಗೆ ವರ್ಗೀಕರಿಸಬಾರದು ನಿಜ. ಹಿಂದೆ ಕೂತವರೂ ಪಾಠಗಳನ್ನು ಗಮನವಿಟ್ಟು ಕೇಳಬಹುದು, ಪರಿಶ್ರಮದಿಂದ ಉತ್ತಮ ದರ್ಜೆಯಲ್ಲಿ ಪಾಸಾಗಲೂಬಹುದು. ಆದರೂ 'ಹಿಂದಿನ ಬೆಂಚ್ ವಿದ್ಯಾರ್ಥಿ' ಎಂಬ ಕಲಂಕವನ್ನು ತೊಡೆದುಹಾಕುವುದು ಸುಲಭ ಅಲ್ಲ.

ಕೇರಳದ (ಮಲೆಯಾಳಂ ಭಾಷೆಯ) ಸಿನೆಮಾ ಒಂದರಲ್ಲಿ ಒಬ್ಬ ವಿದ್ಯಾರ್ಥಿ ಈ ಕಳಂಕವನ್ನು ತೊಡೆದು ಹಾಕಲು ಒಂದು ಉಪಾಯ ಸೂಚಿಸುತ್ತಾನೆ. 'ಹಿಂದಿನ ಬೆಂಚ್' ಎಂಬುದೇ ಇಲ್ಲದ ಹಾಗೆ ಎಲ್ಲರೂ ವೃತ್ತಾಕಾರ ಕೂರೋಣ ಎಂದು ಸಲಹೆ ನೀಡುತ್ತಾನೆ. ಆತನ ಆ ಸಲಹೆಯನ್ನು ಈಗ ಕೇರಳದ ಬಹಳಷ್ಟು ಶಾಲೆಗಳಲ್ಲಿ ಜಾರಿಗೆ ತರಲಾಗುತ್ತದೆ. ಎಲ್ಲ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಬೆಂಚ್‌ಗಳನ್ನೂ ಅರ್ಧ ವೃತ್ತಾಕಾರ ಇಲ್ಲವೆ ಅಂಡಾಕಾರದಲ್ಲಿ ಜೋಡಿಸಲಾಗುತ್ತಿದೆ. ಮಧ್ಯದಲ್ಲಿ ಶಿಕ್ಷಕರು ನಿಂತು ಪಾಠ ಮಾಡುತ್ತಾರೆ.

ಈ ವ್ಯವಸ್ಥೆ ಅದೆಷ್ಟು ಜನಪ್ರಿಯ ಆಗುತ್ತಿದೆ ಎಂದರೆ, ತಮಿಳುನಾಡು ಮತ್ತು ಪಶ್ಚಿಮ ಬಂಗಾಳದ ಕೆಲವು ಶಾಲೆಗಳಲ್ಲೂ ಬೆಂಚ್ ಅಥವಾ ಡೆಸ್ಕ್ ಗಳನ್ನು ಇದೇ ರೀತಿ ಜೋಡಿಸುತ್ತಿರುವ ವರದಿಗಳು ಬರುತ್ತಿವೆ. ಯಾರೂ ಮುಂದಿಲ್ಲ, ಯಾರೂ ಹಿಂದಿಲ್ಲ, ಎಲ್ಲರೂ ಸಮಾನರು!

## ಮೊಳಕೆಯಾಗಿ, ಚಿಗುರಾಗಿ, ಗಿಡವಾಗಬಲ್ಲ ಗಣೇಶ



ಈ ಬಾರಿ ನೀವು ಮಣ್ಣಿನ ಗಣೇಶನನ್ನು ಮಾಡುವಾಗ ಆ ಮಣ್ಣಿನಲ್ಲಿ ನಿಮಗಿಷ್ಟವಾದ ಬೀಜಗಳನ್ನು ಹೂತಿಡಿ. ಅದು ಸಾಸಿವೆ ಅಥವಾ ಎಳ್ಳು ಆಗಿರಬಹುದು; ಚಂಡು ಹೂ, ಅಥವಾ ಸೌತೆಯ ಬೀಜ ಇರಬಹುದು. ಹಬ್ಬ ಮುಗಿದ ಮೇಲೆ ಮನೆಯಲ್ಲೇ ಬಕೆಟ್‌ನಲ್ಲಿ ಗಣಪನನ್ನು ವಿಸರ್ಜನೆ ಮಾಡಿ. ಕ್ರಮೇಣ ಅದು ಕರಗುತ್ತ ಬಂದಂತೆ ನೀರನ್ನು ಬಸಿದು ಬಕೆಟನ್ನು ಬಿಸಿಲಲ್ಲಿಡಿ. ಕೆಲವು ದಿನಗಳ ನಂತರ ಮೊಳಕೆ ಹೊರಬರುತ್ತದೆ. ಅದು ಗಣೇಶನ ಹೊಸರೂಪ! ಹೂಬೀಜವಾಗಿದ್ದರೆ ಹೂವಿನ ರೂಪ. ಕಡಲೆ, ಸೇಂಗಾ ಆಗಿದ್ದರೆ ಗಿಡದ ರೂಪ, ಫಸಲಿನ ರೂಪದಲ್ಲಿ ದೇವರು ಪ್ರತ್ಯಕ್ಷ!



## ಜೆಲ್ಲಿಮೀನುಗಳಿಂದ ನ್ಯೂಕ್ಲಿಯರ್ ಪಾಠ

ಜೆಲ್ಲಿಮೀನು ಎಂದರೆ ಗೊತ್ತು ತಾನೆ? ಸಮುದ್ರದಲ್ಲಿ ತೇಲುವ ಹಸಿರು-ನೀಲಿ ಬಣ್ಣದ ಚಂಡಿನಂಥ ಜೀವಿ. ಇದರ ದೇಹದ ಶೇ 95 ಭಾಗ ಬರೀ ನೀರು. ಅವು ದಡಕ್ಕೆ ತೇಲಿ ಬಂದು ಬಿದ್ದರೆ ಅಪ್ಪಚ್ಚಿಯಾಗಿ, ಲೋಳೆಯ ಪಾಚಿ ಮುದ್ದೆಯಂತೆ ಕಾಣುತ್ತವೆ. ಇವು ಈಚೆಗೆ ಫ್ರಾನ್ಸ್ ದೇಶದಲ್ಲಿ ವಿದ್ಯುತ್ ಶಕ್ತಿಯನ್ನು ಉತ್ಪಾದಿಸುವ ಪರಮಾಣು ಸ್ಥಾವರಕ್ಕೆ ದೊಡ್ಡ ಅಪಾಯವನ್ನೇ ತಂದುಬಿಟ್ಟವು.

ನಮ್ಮ ಕೈಗಾ ಮಾದರಿಯ ಪರಮಾಣು ಸ್ಥಾವರದಲ್ಲಿ ಯುರೇನಿಯಂ ಸರಳುಗಳು ನಿಗಿನಿಗಿ ಕೆಂಡದಂತೆ ಉರಿಯುತ್ತ ನೀರಿನ ಆವಿಯಿಂದ ವಿದ್ಯುತ್ ಉತ್ಪಾದನೆ ಮಾಡುತ್ತವೆ. ಇದಕ್ಕೆ ಸದಾಕಾಲ ತಂಪು ನೀರು ಬರುತ್ತಲೇ ಇರಬೇಕು. ಫ್ರಾನ್ಸ್‌ನ ಗ್ರೇವ್‌ಲೈನ್ ಸ್ಥಾವರದ ಬಳಿ ತಂಪು ನೀರಿಗೆಂದೇ ಸಮುದ್ರಕ್ಕೆ ಪೈಪ್ ಹಾಕಿದ್ದರು. ನೀರಿನ ಜೊತೆ ಕಸಕಡ್ಡಿ ಮೀನು ಏಡಿ ಬಾರದ ಹಾಗೆ ಸೋಸುಜಾಳಿಗೆಯನ್ನೂ ಹಾಕಿದ್ದರು. ಒಂದು ಅಕ್ಕಿಕಾಳಿನ ಗಾತ್ರದ ಜೀವಿಯೂ ಒಳಕ್ಕೆ ಬರುವಂತಿರಲಿಲ್ಲ. ಆದರೆ ಜೆಲ್ಲಿಮೀನುಗಳ ಸೂಕ್ಷ್ಮ ಮೊಟ್ಟೆಗಳು ಪೈಪ್ ಮೂಲಕ ಒಳಕ್ಕೆ ಬರುತ್ತಿರುವುದು ಯಾರಿಗೂ ಗೊತ್ತಾಗಲಿಲ್ಲ. ಆ ಮೊಟ್ಟೆಗಳು ಸ್ಥಾವರದ ಬಳಿಯ ಬೆಚ್ಚನ್ನ ನೀರಿನಲ್ಲಿ ಮರಿಗಳಾಗಿ, ಮುಷ್ಟಿಗಾತ್ರದ ಲಕ್ಷೋಪಲಕ್ಷ ಚೆಂಡುಗಳಾಗಿ ಬೆಳೆದವು. ಪೈಪ್ ಕಟ್ಟಿಕೊಂಡಿತು. ತಂಪುನೀರು ಬಾರದೇ ವಿದ್ಯುತ್ ಸ್ಥಾವರದ ಕಾವು ಏರುತ್ತ ಏರುತ್ತ ಇನ್ನೇನು ಚೆರ್ನೊಬಿಲ್ ಮಾದರಿಯ ಸ್ಫೋಟವೇ ಆಗಬಹುದಿತ್ತು. ಎಚ್ಚರಿಕೆಯ ಗಂಟೆಗಳು ಮೊಳಗಿದವು. ತಕ್ಷಣ ಪರಮಾಣು ಘಟಕವನ್ನು ಬಂದ್ ಮಾಡಲಾಯಿತು. ಆಗಸ್ಟ್ 10ರಂದು ಹತ್ತಾರು ನಗರಗಳು ಕರೆಂಟ್ ಇಲ್ಲದೇ ಕತ್ತಲಲ್ಲಿ ಮುಳುಗಿದವು. ರಿಪೇರಿಗೆ ವಾರಗಟ್ಟಲೆ ಬೇಕಾಯಿತು.

ಮಿದುಳೇ ಇಲ್ಲದ ಪೆದ್ದು ಜೀವಿಯೊಂದು ಅತ್ಯಂತ ಚುರುಕು ಮಿದುಳಿನ ಮನುಷ್ಯನ ತಾಂತ್ರಿಕ ಸಾಧನೆಗೆ ಸೆಡ್ಡು ಹೊಡೆದಿತ್ತು! ಅಂದಹಾಗೆ, ಹೀಗಾಗಿದ್ದು ಇದೇ ಮೊದಲೇನಲ್ಲ. ಹಿಂದೆ 1980ರ ದಶಕದಲ್ಲಿ ಚೆನ್ನೈ ಬಳಿ ಇರುವ ನಮ್ಮ ಕಲ್ಪಾಕ್ಕಮ್ ವಿದ್ಯುತ್ ಸ್ಥಾವರವನ್ನೂ ಈ ಕ್ಷುದ್ರಜೀವಿ ಜೆಲ್ಲಿಫಿಶ್ ಹೀಗೇ ಬಂದ್ ಮಾಡಿಸಿತ್ತು. ಎಲ್ಲರೂ ಮರೆತಿರುವಾಗ ತಾನಿದ್ದೇನೆ ಎಂದು ಇದು ಮತ್ತೆ ಎಚ್ಚರಿಕೆಯ ಗಂಟೆಯನ್ನು ಮೊಳಗಿಸಿದೆ.

# ಹೊಟ್ಟೆಯಲ್ಲಿನ ಕಸ ಗುಡಿಸಲು ನಾರಿನ ಪೊರಕೆ





ನಾವು ಸೇವಿಸುವ ಆಹಾರದಲ್ಲಿ ಪ್ರೋಟೀನು, ಕೊಬ್ಬು, ಶರ್ಕರಪಿಷ್ಟ, ಸಕ್ಕರೆ ಅಂಶ ಸಾಕಷ್ಟು ಇರಬೇಕು- ಇದು ಎಲ್ಲರಿಗೂ ಗೊತ್ತಿದೆ. ಆದರೆ ನಾರಿನ (ಫೈಬರ್) ಅಂಶವೂ ಅಷ್ಟೇ ಮಹತ್ವದ್ದಾಗಿದೆ. ನಾರಿನ ಅಂಶ ನಮ್ಮ ಶರೀರದ ಬೆಳವಣಿಗೆಯಲ್ಲಿ ಯಾವ ಪಾತ್ರವನ್ನೂ ವಹಿಸುವುದಿಲ್ಲ. ಆದರೆ ಅನ್ನಮಾರ್ಗದಲ್ಲಿ ಅನಗತ್ಯ ಶೇಖರವಾಗುವ ಕೊಳೆಯನ್ನು ಗುಡಿಸಿ ಸಾಗಿಸುವಲ್ಲಿ ಅದು ಪೊರಕೆಯಂತೆ ಅತಿ ಮಹತ್ವದ ಕೆಲಸ ಮಾಡುತ್ತದೆ.

ನಾರು ಎಂದ ಮಾತ್ರಕ್ಕೆ ತೆಂಗಿನ ನಾರು, ಸೆಣಬಿನ ನಾರು ಎಂದರ್ಥವಲ್ಲ. ನಾವು ದಿನವೂ ಊಟ ತಿಂಡಿಗೆ ಬಳಸುವ ಸಸ್ಯಾಹಾರಗಳಲ್ಲೇ ನಾರಿನ ಅಂಶ ಇರುತ್ತದೆ. ಅದರಲ್ಲಿ ಎರಡು ವಿಧ ಇವೆ: ಜಠರದಲ್ಲಿ ಕರಗುವ (ಆದರೆ ಅಂಟಿನ ಮುದ್ದೆಯಂತೆ ಓಡಾಡುವ) ನಾರು ಒಂದು ವಿಧ. ಅವು ದೇಹಕ್ಕೆ ಹೆಚ್ಚಿನಿಸಿದ ಸಕ್ಕರೆ ಅಥವಾ ಕೊಲೆಸ್ಟೆರಾಲ್ ಅಂಶವನ್ನು ಹೊರಕ್ಕೆ ಕಳಿಸುತ್ತವೆ. ಅಂಥ ಕರಗುವ ನಾರಿನ ಉದಾಹರಣೆ ಎಂದರೆ ಪಪ್ಪಾಯಾ (ಪರಂಗಿ), ಬಾಳೆಹಣ್ಣು (ಅದರ ಸಿಪ್ಪೆ), ಕಿತ್ತಳೆ, ಮೋಸಂಬಿ ಮತ್ತು ಬೇಳೆಕಾಳುಗಳು. ಇನ್ನು ಎರಡನೆಯ □ಕರಗದ ನಾರು□ ಎಂದರೆ ಅನ್ನನಾಳದ ತ್ಯಾಜ್ಯಗಳನ್ನು ಗುಡಿಸಿ ಹೊರಕ್ಕೆ ಕಳಿಸುವ ವ್ಯವಸ್ಥೆ. ಇದಕ್ಕೆ ಉದಾಹರಣೆ ಎಂದರೆ ಗೋಧಿ (ಮೈದಾ ಅಲ್ಲ!), ಕೆಂಪಕ್ಕಿ, ಕ್ಯಾರೆಟ್, ರಾಗಿ, ಸೊಪ್ಪು, ತರಕಾರಿಗಳು. ಇವುಗಳ ಪ್ರಮಾಣ ನಿತ್ಯದ ಊಟ ತಿಂಡಿಯಲ್ಲಿ ಜಾಸ್ತಿ ಇದ್ದರೆ ಬೇಗ ಹಸಿವೆ ಆಗುವುದಿಲ್ಲ. ಬೊಜ್ಜು ಬರುವುದಿಲ್ಲ. ಮಲವಿಸರ್ಜನೆ ಸರಿಯಾಗಿ ಆಗುತ್ತದೆ. ಅಂದರೆ ಅದು ದ್ರವರೂಪದ್ದೂ ಆಗಿರುವುದಿಲ್ಲ. ಅದಕ್ಕೆಂದು ತೀರ ತಿಣುಕಬೇಕಾಗಿಯೂ ಇಲ್ಲ.

ಈಗ ನಿಮಗೊಂದು ಚಿಕ್ಕ ಚಟುವಟಿಕೆ: ನಾರಿನ ಅಂಶ ಜಾಸ್ತಿ ಇರುವ ಪದಾರ್ಥಗಳ ಹೆಸರುಗಳು ಇಲ್ಲಿವೆ. ಎಲ್ಲ ಎರ್‍ರಾಬಿರಿಯಾಗಿವೆ. ಅವನ್ನು (1) ತರಕಾರಿ (2) ದ್ವಿದಳ ಧಾನ್ಯ (3) ಬೀಜ (4) ಗಡ್ಡೆಗೆಣಸು (5) ದ್ವಿದಳ ಧಾನ್ಯ (6) ಹಣ್ಣುಹಂಪಲು (7) ಸಿರಿಧಾನ್ಯ- ಹೀಗೆ ವಿಂಗಡಿಸಿ ಸಾಲಾಗಿ ಹಲಗೆಯ ಮೇಲೆ ಚಿತ್ರ ಸಮೇತ ಇಡಬಲ್ಲಿರಾ? ಇಲ್ಲಿದೆ ಎರ್‍ರಾಬಿರಿ ಪಟ್ಟಿ: ಕಡಲೆಬೇಳೆ, ಗೋಧಿ, ಸೀಬೆ (ಪೇರಳೆ), ಹೂಕೋಸು, ಗೆಣಸು, ಬೆಂಡೆಕಾಯಿ, ಆರಕ, ಮಾವು, ಜೋಳ, ಮೂಲಂಗಿ ಸೊಪ್ಪು, ಕೆಂಪಕ್ಕಿ, ಬಾಳೆದಿಂಡು, ಹೆಸರುಕಾಳು, ಸೂರ್ಯಕಾಂತಿ ಬೀಜ, ನವಣೆ, ಉದ್ದು, ಕ್ಯಾಬೇಜ್, ಮಾವು, ಗಜ್ಜರಿ (ಕ್ಯಾರಟ್), ಕರಿಬೇವು, ಮರಗೆಣಸು, ಬೀಟ್‌ರೂಟ್, ಕೆಂಪಕ್ಕಿ, ಅಗಸೆ, ಹೊನಗೊನೆ, ರಾಗಿ, ಹರಿವೆ, ಗೋಡಂಬಿ, ನುಗ್ಗೆ.

# ನೊಬೆಲ್ ವಂಚಿತ ಯೆಲ್ಲಪ್ರಗಡ ಸುಬ್ಬರಾವ್




ಆಂಧ್ರಪ್ರದೇಶದ ಭೀಮಾವರಂ ಪಟ್ಟಣದ ಒಂದು ಬಡ ಕುಟುಂಬದಲ್ಲಿ 1895ರಲ್ಲಿ ಒಬ್ಬ ಹುಡುಗ ಜನಿಸಿದ. ಸುಬ್ಬರಾವ್ ಹೆಸರಿನ ಆತ ಕೂಲಿಗೆ ಹೋಗುವ ಬದಲು ಶಾಲೆಗೆ ಹೋಗುವುದಾಗಿ ಹಠ ಹಿಡಿದ. ಆಟವಾಡುವಾಗ ಬಿದ್ದು ಗಾಯವಾದಾಗ ಅಥವಾ ಅಮ್ಮ ಕಾಯಿಲೆ ಬಿದ್ದಾಗ ವೈದ್ಯರು ನೀಡುತ್ತಿದ್ದ ಔಷಧಗಳನ್ನು ಅವನು ಗಮನವಿಟ್ಟು ನೋಡಿದ. ತಾನೂ ವೈದ್ಯನಾಗಬೇಕು ಎಂದು ಬಯಸಿದ. ಕಷ್ಟಪಟ್ಟು ಸಂಸ್ಕೃತ ಕಲಿತು, ವೈದ್ಯಶಾಸ್ತ್ರದ ಗ್ರಂಥಗಳನ್ನು ಓದಿದ. ಆದರೆ ಡಾಕ್ಟರ್ ಪದವಿ ಓದಲು ಅವನಿಗೆ ಪ್ರವೇಶ ಸಿಗಲಿಲ್ಲ. ಏಕೆಂದರೆ ಆತ ದೇಶಭಕ್ತಿಯ ಪ್ರತೀಕವಾಗಿ ಖಾದಿ ಧರಿಸಿದ್ದ!

ಕೆಲಕಾಲ ಶಿಕ್ಷಕನಾಗಿ ತುಸು ಹಣ ಸಂಪಾದಿಸಿ ಆತ ಹಡಗು ಏರಿ ಅಮೆರಿಕಕ್ಕೆ ಹೋದ. ಜೀವಶಾಸ್ತ್ರದ ಪ್ರಯೋಗಶಾಲೆಯಲ್ಲಿ ಕೆಲಸಗಾರನಾಗಿ ದುಡಿದ. ಮಾನವ ಶರೀರ ವಿಜ್ಞಾನದ ಬಗ್ಗೆ ತಾನೇ ಸಂಶೋಧನೆ ಮಾಡುತ್ತ ಯಲ್ಲಪ್ರಗಡ ಸುಬ್ಬರಾವ್ ಎಂದು ಪ್ರಖ್ಯಾತಿ ಪಡೆದರು. ಸ್ನಾಯುಗಳಿಗೆ ಶಕ್ತಿ ನೀಡುವ ಎಟಿಪಿ ಎಂಬ ಜೀವರಸಾಯನವನ್ನು ಪತ್ತೆ ಹಚ್ಚಿದರು. ರಕ್ತ ಶುದ್ಧೀಕರಣ ಮಾಡುವ ಫೋಲಿಕ್ ಆಸಿಡ್ ಕಂಡುಹಿಡಿದರು. ಆನೆಕಾಲು ರೋಗವನ್ನು ಸಂಪೂರ್ಣ ನಿವಾರಿಸಬಲ್ಲ ಡಿಇಸಿ ಎಂಬ ಔಷಧವನ್ನು ಸೃಷ್ಟಿ ಮಾಡಿದರು. ಟೆಟ್ರಾಸೈಕ್ಲಿನ್ ಎಂಬ ಮೊಟ್ಟ ಮೊದಲ ಆಂಟಿಬಯಾಟಿಕ್ ಔಷಧವನ್ನು ತಯಾರಿಸಿದರು. ಇವೆಲ್ಲವನ್ನೂ ಈಗಲ್ಲ, ನೂರು ವರ್ಷಗಳ ಹಿಂದೆಯೇ ಅವರು ಸಾಧಿಸಿದರು. 1948ರಲ್ಲಿ ನಿಧನರಾದರು. ಅವರು ಸಂಶೋಧಿಸಿದ ಔಷಧಗಳು ಈಗಲೂ ಬಳಕೆಯಲ್ಲಿವೆ. ನೊಬೆಲ್ ಪಾರಿತೋಷಕದಿಂದ ವಂಚಿತರಾದ ಅಪರೂಪದ ವಿಜ್ಞಾನಿಗಳ ಸಾಲಿನಲ್ಲಿ ಅವರ ಹೆಸರೂ ಬರುತ್ತದೆ.

ಸೆಪ್ಟಂಬರ್ 12 ಯಲ್ಲಪ್ರಗಡ ಸುಬ್ಬರಾವ್ ಅವರ ಜನ್ಮದಿನ.

# ಕೋಲ್ಕತಾದಲ್ಲೂ ಪ್ಲೇಟ್ ಬ್ಯಾಂಕ್






ಅದಮ್ಯ ಚೇತನದ 'ಪ್ಲೇಟ್ ಬ್ಯಾಂಕ್' ವಿಷಯ ನಿಮಗೆಲ್ಲ ಗೊತ್ತಿದೆ ತಾನೆ? ಕಲ್ಯಾಣ ಮಂಟಪಗಳಲ್ಲಿ ಊಟ ಉಪಚಾರ ಕೈಂದು ದಿನವೂ ಸಾವಿರಾರು ಪ್ಲಾಸ್ಟಿಕ್ ತಟ್ಟೆ, ಲೋಟ, ಚಮಚಗಳನ್ನು ಬಳಸಿ ಎಸೆಯಲಾಗುತ್ತದೆ. ಪ್ಲಾಸ್ಟಿಕ್ ಬದಲು ಸ್ಟೀಲಿನ ತಟ್ಟೆ ಲೋಟಗಳ ಉಗ್ರಾಣ (ಬ್ಯಾಂಕ್) ಇದ್ದರೆ ಅದನ್ನು ಯಾವುದೇ ಭೋಜನಕೂಟಕ್ಕೆ ಎರವಲು ಕೊಡಬಹುದು. ಪ್ಲಾಸ್ಟಿಕ್ ವಸ್ತುಗಳು ತಿಪ್ಪೆಗೆ ಹೋಗುವುದನ್ನು ತಡೆಗಟ್ಟಬಹುದು. ಸ್ಟೀಲಿನ ಪಾತ್ರೆಗಳನ್ನು ಬಳಸಿ, ಸ್ವಚ್ಛ ಇಟ್ಟುಕೊಂಡರೆ ಮತ್ತೆ ಮತ್ತೆ ಬಳಸಬಹುದು ಖರ್ಚೂ ಇಲ್ಲ.

ಕರ್ನಾಟಕದ ಬೇರೆ ಬೇರೆ ನಗರಗಳಲ್ಲಿ ಇಂಥ 20ಕ್ಕೂ ಹೆಚ್ಚು 'ಪ್ಲೇಟ್‌ಬ್ಯಾಂಕ್' ಗಳನ್ನು ಅದಮ್ಯ ಚೇತನ ಸಂಸ್ಥೆ ಸ್ಥಾಪಿಸಿದೆ. ಇದೇ ಮೊದಲ ಬಾರಿಗೆ ಕೋಲ್ಕತ್ತಾದ ಪ್ರತಿಷ್ಠಿತ ಎಂಜಿನಿಯರಿಂಗ್ ವಿಜ್ಞಾನ ತಂತ್ರಜ್ಞಾನ ಸಂಸ್ಥೆಯಲ್ಲೂ (IIEST) ಒಂದು ಪ್ಲೇಟ್ ಬ್ಯಾಂಕ್ ಆರಂಭವಾಗಿದೆ. ಅದಮ್ಯ ಚೇತನ ಸಂಸ್ಥೆಯ ನಿರ್ದೇಶಕಿ ಡಾ. ತೇಜಸ್ವಿನಿ ಅನಂತ ಕುಮಾರ್ ಅಲ್ಲಿ ಶಿಬ್‌ಪುರ್ ಎಂಬಲ್ಲಿನ ಭಾರತೀಯ ಎಂಜಿನಿಯರಿಂಗ್ ವಿಜ್ಞಾನ ಸಂಸ್ಥೆಯ ಆಡಳಿತ ಮಂಡಳಿಯ ನಿರ್ದೇಶಕಿಯೂ ಆಗಿದ್ದು ಅವರ ಸಲಹೆಯ ಮೇರೆಗೆ 2000 ತಟ್ಟೆಲೋಟಗಳ ನಿಧಿಯನ್ನು ಈಚೆಗೆ ಸ್ಥಾಪಿಸಲಾಗಿದೆ. ಕ್ಯಾಂಪಸ್ ಆವರಣದಲ್ಲಿನ ಯಾವುದೇ ಸಾಮೂಹಿಕ ಸಂಭ್ರಮಾಚರಣೆಯಲ್ಲಿ ಇವನ್ನು ಬಳಸಲಾಗುತ್ತದೆ. ಮಾಲಿನ್ಯರಹಿತ ಸುಸ್ಥಿರ ಬದುಕಿನ ಮಾದರಿಯನ್ನು ಬಂಗಾಳಿಗಳ ಸಮಾಜಕ್ಕೆ ಪರಿಚಯಿಸಿದಂತಾಗಿದೆ.

## ಇಟಲಿಯಲ್ಲೂ ನಾಗಪಂಚಮಿ!



ನಮ್ಮ ದೇಶದ ನಾಗಪಂಚಮಿಯ ಹಾಗೆ ಇಟಲಿ ದೇಶದ ಕೊಕುಲ್ಲೊ ಎಂಬ ಹಳ್ಳಿಯಲ್ಲಿ ಪ್ರತಿವರ್ಷವೂ ಮೇ 1ರಂದು ಹಾವಿನ ಹಬ್ಬ ನಡೆಯುತ್ತದೆ. ಈ ಹಬ್ಬದ ಸಿದ್ಧತೆಗೆಂದೇ ಎರಡು ಮೂರು ತಿಂಗಳಿಂದ ಊರಿನ ಜನರು ಗುಡ್ಡಬೆಟ್ಟಗಳಲ್ಲಿ ಓಡಾಡಿ ಹಾವುಗಳನ್ನು ಹಿಡಿದು (ಅವು ಇದ್ದ ತಾಣದಲ್ಲಿ ಪುಟ್ಟ ಬಾವುಟ ನೆಟ್ಟು) ಬುಟ್ಟಿಗಳಲ್ಲಿ ಮನೆಗೆ ತಂದು ಸಾಕಿರುತ್ತಾರೆ. ವಿಷವಿಲ್ಲದ ಮೂರು ಪ್ರಭೇದಗಳ ಹಾವುಗಳನ್ನು ಜನರು ಹಬ್ಬದ ದಿನ ವಾದ್ಯಗೋಷ್ಠಿಯೊಂದಿಗೆ ಮೆರವಣಿಗೆಯಲ್ಲಿ ತಂದು ಊರಿನ ಮಧ್ಯೆ ಇರುವ ಡೊಮೆನಿಕೊ ಡೀ ಸೋರಾ ಎಂಬ ಸಂತನ ಪ್ರತಿಮೆಯ ಬಳಿ ಬರುತ್ತಾರೆ. ಕೆಲವರು ಹೂಹಾರ ಹಿಡಿದು ನರ್ತಿಸುತ್ತಿದ್ದರೆ ಇತರರು ತಾವು ತಂದ ಹಾವನ್ನು ಪ್ರತಿಮೆಗೆ ಹಾರದಂತೆ ಹಾಕುತ್ತಾರೆ. ಪೂಜೆ ಮುಗಿದ ಮೇಲೆ ಸಂತನ ಪ್ರತಿಮೆಯ ಯಾವ ಭಾಗಕ್ಕೆ ಹೆಚ್ಚು ಹಾವುಗಳು ಸುತ್ತಿಕೊಂಡಿವೆ ಎಂಬುದನ್ನು ಆಧರಿಸಿ ಹಿರಿಯರು ಕಣಿ ಹೇಳುತ್ತಾರೆ. ಅಂದರೆ ಆ ವರ್ಷದ ಹವಾಮಾನ, ಮಳೆ-ಬೆಳೆಯ ಭವಿಷ್ಯ ಹೇಳುತ್ತಾರೆ. ಆಮೇಲೆ ಸಂತನ ಪ್ರತಿಮೆಯನ್ನು ಪಲ್ಲಕ್ಕಿಯ ಮೇಲೆ ಕೂರಿಸಿ ಊರ ತುಂಬ ಮೆರವಣಿಗೆ ಮಾಡುತ್ತಾರೆ. ವನಭೋಜನದ ನಂತರ ಆ ಹಾವುಗಳನ್ನು ಅವುಗಳ ಮೂಲ ವಾಸಸ್ಥಾನಕ್ಕೇ ಬಿಟ್ಟು ಬರುತ್ತಾರೆ.

ಈ ಹಬ್ಬದ ಹೆಸರೇ ಫೆಸ್ತಾ ದಿ ಸೆರ್ಪಾರಿ – ಅಂದರೆ ಹಾವುಗೊಲ್ಲರ ಹಬ್ಬ. ಸೆರ್ಪಾರಿ ಅಂದರೆ ಸರ್ಪತಜ್ಞ ಎಂದರ್ಥ. ಅನೇಕ ಶತಮಾನಗಳ ಹಿಂದೆ ಡೊಮೆನಿಕೊ ಎಂಬ ಸಂತ ಅಲ್ಲಿನ ಜನರಿಗೆ ಜ್ವರ, ರೇಬೀಸ್, ಹಲ್ಲುನೋವು ಇತ್ಯಾದಿಗಳಿಗೆ ನಾಟಿ ಔಷಧ ಮತ್ತು ವಿಶೇಷವಾಗಿ ಹಾವು ಚೇಳುಗಳ ವಿಷ ಇಳಿಸುವ ಮದ್ದನ್ನು ಕೊಡುತ್ತಿದ್ದನಂತೆ. ಈಚೆಗೆ ದೂರದ ಊರುಗಳ ಪ್ರವಾಸಿಗಳನ್ನು ಆಕರ್ಷಿಸುತ್ತಿರುವ ಈ ಹಬ್ಬವನ್ನೇ ವಿಜ್ಞಾನಿಗಳು ನಿಸರ್ಗ ರಕ್ಷಣೆಯ ಪಾಠಶಾಲೆಯನ್ನಾಗಿ ಪರಿವರ್ತಿಸಿದ್ದಾರೆ ಸುತ್ತಮುತ್ತಲಿನ ಬೆಟ್ಟ, ಕಾಡುಮೇಡುಗಳಲ್ಲಿನ ಸಸ್ಯ, ಪ್ರಾಣಿ, ಮೂಲಿಕೆಗಳ ಬಗ್ಗೆ ಮತ್ತು ಪರಿಸರ ಸಮತೋಲದಲ್ಲಿ ಹಾವುಚೇಳುಗಳಂಥ ಜೀವಿಗಳ ಮಹತ್ವದ ಬಗ್ಗೆ ಪ್ರದರ್ಶನ ನೀಡುತ್ತಾರೆ. ಹಳೆಯ ಸಂಪ್ರದಾಯವನ್ನು ಉಳಿಸಿಕೊಂಡೇ ಹೊಸ ಜ್ಞಾನ ಪ್ರಸಾರದ ಕೆಲಸ ಅಲ್ಲಿ ನಡೆಯುತ್ತಿದೆ.

## ಗಣೇಶ ಮತ್ತು ಗರಿಕೆ ಹುಲ್ಲು



ಶಿವನಿಗೆ ಬಿಲ್ವಪತ್ರೆ, ಶ್ರೀಕೃಷ್ಣನಿಗೆ ತುಳಸಿ. ಆದರೆ ಗಣೇಶನಿಗೆ ಪಾಪ, ಯಾಕೆ ಯಕಃಶ್ಚಿತ ಗರಿಕೆ ಹುಲ್ಲು?, ಪರಿಮಳವಿಲ್ಲದ, ಸಾಮಾನ್ಯವೆನಿಸುವ ಗರಿಕೆ ಹುಲ್ಲೇ ಪ್ರಿಯವಾಗುತ್ತದೆ. ಏಕೆ? ಇದು ಕೇವಲ ಹುಲ್ಲಲ್ಲ. ಗರಿಕೆ ಹುಲ್ಲಿಗೆ ಅಪಾರ ಮಹತ್ವ ಇದೆ. ಮೊದಲನೆಯದಾಗಿ, ಆನೆಗೆ ಹುಲ್ಲು ಅಚ್ಚುಮೆಚ್ಚು. ಗಣೇಶನು ಆನೆಯ ಶಿರೋಭೂಷಣವನ್ನೇ ಧರಿಸಿರುವುದರಿಂದ, ಅವನಿಗೆ ಗರಿಕೆ ಹುಲ್ಲಿನೊಂದಿಗೆ ಸಹಜವಾದ ಸಂಬಂಧ.

ಇದರ ಹಿಂದೆ ಇನ್ನೂ ಒಂದು ಪೌರಾಣಿಕ ಕಥೆಯೂ ಇದೆ. ಅನಲಾಸುರ ಎಂಬ ಅಗ್ನಿ ಉಗುಳುವ ರಾಕ್ಷಸನನ್ನು ಗಣೇಶನು ನುಂಗಿದ ನಂತರ ಅವನ ಹೊಟ್ಟೆಯಲ್ಲಿ ತೀವ್ರ ಉಷ್ಣಾಂಶ ಮತ್ತು ಉಬ್ಬರ ಉಂಟಾಯಿತು. ಆಗ ಋಷಿಗಳು ಗರಿಕೆ ಹುಲ್ಲನ್ನು ಅರ್ಪಿಸಿದಾಗ ಆ ಉಷ್ಣ ಶಮನವಾಯಿತು. ಆ ದಿನದಿಂದ ಗಣೇಶನಿಗೆ ಗರಿಕೆಯು ಅತ್ಯಂತ ಪ್ರಿಯವಾಯಿತು ಎಂದು ನಂಬಲಾಗಿದೆ. ಗರಿಕೆ ಹುಲ್ಲನ್ನು ಗಣೇಶನಿಗೆ ಅರ್ಪಿಸುವುದು ಕೇವಲ ಒಂದು ಪೂಜೆ ಅಲ್ಲ, ಅದು ಪ್ರಕೃತಿಯ ಮಹತ್ವವನ್ನು ನೆನಪಿಸುವ ಸಂಕೇತ. ಈ ಹುಲ್ಲು ನಮ್ಮ ಪರಿಸರಕ್ಕೆ ಎಷ್ಟು ಅವಶ್ಯಕವೆಂಬುದನ್ನು ಮೌನವಾಗಿ ಬೋಧಿಸುತ್ತದೆ. ಗಣೇಶನೊಂದಿಗೆ ಗರಿಕೆ ಹುಲ್ಲನ್ನು ನೀರಿಗೆ ವಿಸರ್ಜನೆ ಮಾಡಿದಾಗ, ಅದು ಜಲಚರಗಳಿಗೆ ಪೋಷಕಾಂಶವಾಗುತ್ತದೆ. ಹೀಗಾಗಿ ಗಣೇಶನ ಆರಾಧನೆ ಪ್ರಕೃತಿ ಮತ್ತು ಜೀವಜಗತ್ತಿನ ಆರಾಧನೆಯೇ ಆಗುತ್ತದೆ. ಗರಿಕೆ ಕೇವಲ ಧಾರ್ಮಿಕ ಸಂಕೇತವಲ್ಲ, ಆರೋಗ್ಯದ ದೃಷ್ಟಿಯಲ್ಲಿಯೂ ಮಹತ್ವದ್ದಾಗಿದೆ. ಇದು ರಕ್ತ ಶುದ್ಧೀಕರಣ, ಜೀರ್ಣಕ್ರಿಯೆ ಸುಧಾರಣೆ, ಪಿತ್ತ ಮತ್ತು ಕಫ ದೋಷ ನಿವಾರಣೆಗಳಿಗೆ ಸಹಾಯಕವಾಗುತ್ತದೆ. ಹೀಗಾಗಿ ಗಣೇಶನ ಆರಾಧನೆಯಲ್ಲಿ ಗರಿಕೆಯ ಸ್ಥಾನವು ಪೌರಾಣಿಕ, ಪರಿಸರಾತ್ಮಕ ಹಾಗೂ ಆರೋಗ್ಯಾತ್ಮಕ ಮೂರೂ ಆಯಾಮಗಳನ್ನು ಒಳಗೊಂಡಿದೆ.

## ನನಸಾದ ಕನಸು-ಈಡೇರಿದ ಭರವಸೆ







1996 ರಲ್ಲಿ ಮೊದಲ ಬಾರಿಗೆ ಸಂಸದರಾದ ಅನಂತಕುಮಾರ್ ಬೆಂಗಳೂರಿನ ಬಗ್ಗೆ ಎರಡು ದೊಡ್ಡ ಕನಸುಗಳನ್ನು ಕಂಡಿದ್ದರು. ದೂರಗಾಮಿ ದೃಷ್ಟಿ ಹೊಂದಿರುವ ಅವರು, ಬೆಳೆಯುತ್ತಿರುವ ಬೆಂಗಳೂರು ನಗರವು ಅಂತಾರಾಷ್ಟ್ರೀಯ ಮಟ್ಟದಲ್ಲಿ ವ್ಯವಹರಿಸಲು ಅನುಕೂಲವಾಗುವಂತೆ ಪ್ರತಿಷ್ಠಿತ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣ ಹಾಗೂ ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ವಾಹನಗಳ ಸಂಖ್ಯೆಯ ಒತ್ತಡವನ್ನು ನಿಭಾಯಿಸಲು ಅಗತ್ಯವಾದ ಮೆಟ್ರೋ ಯೋಜನೆ ಜಾರಿ - ಇವು ಅವರು ಕಂಡ ಕನಸುಗಳು, 1998 ರಲ್ಲಿ ವಿಮಾನಯಾನ ಖಾತೆ ಸಚಿವರಾಗಿ ಕರ್ನಾಟಕ ಸರ್ಕಾರದೊಂದಿಗೆ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನಾಂದಿ ಹಾಡಿದರು.

ಕರ್ನಾಟಕ ಸರ್ಕಾರವು ಮೆಟ್ರೋ ಯೋಜನೆಯನ್ನು ಯುಬಿ ಗ್ರೂಪ್ ಸಹಕಾರದಲ್ಲಿ ಜಾರಿಗೊಳಿಸಲು ಯೋಚಿಸಿತ್ತು. ಅನಂತಕುಮಾರ್ 2001 ರ ವೇಳೆಗೆ ಕೇಂದ್ರದ ನಗರಾಭಿವೃದ್ಧಿ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು. ಕೂಡಲೇ ತಮ್ಮ ಎರಡನೇ ಕನಸನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಕಾರ್ಯತತ್ಪರರಾದ ಅವರು, ಯುಬಿ ಗ್ರೂಪ್ ಜತೆಗಿನ ಒಪ್ಪಂದವನ್ನು ರದ್ದುಮಾಡಿ ದೆಹಲಿ ಮೆಟ್ರೋ ನಿರ್ಮಾತೃ ಇ. ಶ್ರೀಧರನ್ ಅವರನ್ನು ಈ ಯೋಜನೆಗೆ ಜೋಡಿಸುವ ಮೂಲಕ ಚಾಲನೆ ನೀಡಿದರು. ಕೇಂದ್ರ ಸರ್ಕಾರವು ಅದಕ್ಕೆ ಬೇಕಾದ ಹಣ ಮಂಜೂರು ಮಾಡುವಂತೆ ಗಮನವಹಿಸಿದರು. ಈ ಯೋಜನೆಗಾಗಿ ಕೇಂದ್ರವು ಶೇ.15 ಈಕ್ವಿಟಿ, ಶೇ.10 ಬಡ್ಡಿರಹಿತ ಸಾಲ ನೀಡಲು ಮುಂದಾಯಿತು. ಅಲ್ಲದೇ ಮೆಟ್ರೋ ಯೋಜನೆಯನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜಂಟಿ ಯೋಜನೆಯಾಗಿ ಪರಿವರ್ತಿಸಲಾಯಿತು. ಆನಂತರ ಸಂಪುಟದ ಒಪ್ಪಿಗೆ ಪಡೆದು ಯೋಜನಾ ಆಯೋಗದ ಅನುಮತಿಗಾಗಿ ಕಳುಹಿಸಲಾಯಿತು.

2004 ರಲ್ಲಿ ಯೋಜನಾ ಆಯೋಗದ ಅನುಮತಿ ದೊರೆತು ಬೆಂಗಳೂರಿಗೆ ಮೆಟ್ರೋ ಬರುವುದು ಖಚಿತವಾಯಿತು. ಇಂದು ಬೆಂಗಳೂರಿಗೆ 96.1 ಕಿ.ಮೀ. ಉದ್ದದ ಮೆಟ್ರೋ ನಿರ್ಮಾಣವಾಗಿರುವುದರ ಹಿಂದೆ ಅನಂತಕುಮಾರ್ ಅವರು ವಹಿಸಿದ ಪರಿಶ್ರಮ ಗಮನಾರ್ಹ.

ನಾನು ಕಂಡಂತೆ



ಅನಂತಕುಮಾರ್

# ಎರಡು ಕನಸು ಬಿತ್ತಿದ್ದ ಅನಂತಜಿ..!

ಅನಂತಕುಮಾರಜಿ ಅವರ ಜತೆಗೆ ನನ್ನದೊಂದು ಥರ ಅವಿನಾಭಾವ ಸಂಬಂಧ. ನಾನು ದಿವಂಗತ ರಾಮ ಮನಗೂಳಿ ಅವರ ತಮ್ಮನಾಗಿರುವೆ. ರಾಮಣ್ಣ ಮತ್ತು ಪೂರ್ಣಾವಧಿ ಕಾರ್ಯಕರ್ತರಾಗಿದ್ದ ರವಿ ಎಲಿಗಾರ ಅವರು ಅಖಂಡ ವಿಜಯಪುರ ಜಿಲ್ಲೆಯಲ್ಲಿ ಅಭಾವಿಪ ಕಟ್ಟಿ ಬೆಳೆಸಲು ತುಂಬಾ ಶ್ರಮಿಸಿದವರು. ಬಹುಷ 1984ರಲ್ಲಿ ಅನಂತಕುಮಾರ ಅವರು ಅಭಾವಿಪದ ರಾಜ್ಯ ಸಂಘಟನಾ ಕಾರ್ಯದರ್ಶಿಯಾಗಿದ್ದರು. ನಾನಾಗ 9ನೇ ತರಗತಿ. ನನ್ನ ಅಣ್ಣ ರಾಮಣ್ಣನಿಗೆ ಆರಾಮ ತಪ್ಪಿತ್ತು. ಆಗ ಅವರನ್ನು ಭೇಟಿಯಾಗಲು ಅನಂತಕುಮಾರ ಅವರು ಮನೆಗೆ ಬಂದಿದ್ದರು. ಆಗ ಅವರ ಪರಿಚಯವಾಯಿತು.

ಏನು ಕಲಿಯುತ್ತಿ ಪ್ರಾಣಿ..? ಎಂಬುದು ಅವರ ಪ್ರಶ್ನೆಯಾಗಿತ್ತು. ನಾನು 9ನೇ ತರಗತಿ ಎಂದ್ದೆ. ಆಗ ಅವರು ಹೇಳಿದ್ದು, ಇನ್ನೂ ಒಂದು ವರ್ಷವಾದಮೇಲೆ ನಮಗೆ ಇನ್ನೂ ಒಬ್ಬ ಅಭಾವಿಪ ಕಾರ್ಯಕರ್ತ ಸಿಗುತ್ತಾನೆ ಎಂದು. ಮುಂದೆ ನಾನು ಬಾಗಲಕೋಟೆಯಿಂದ ವಿಜಯಪುರಕ್ಕೆ ಹೋದೆ. ಅಲ್ಲಿ ಪಿಯುಸಿಗೆ ಅಭಾವಿಪ ಕಾರ್ಯಕರ್ತನಾಗಿ ಅವರ ನಿರಂತರ ಸಂಪರ್ಕಕ್ಕೆ ಬಂದೆ. ಅವರ ನೇತೃತ್ವದಲ್ಲಿ 1985ರ ದೆಹಲಿಯ ರಾಷ್ಟ್ರೀಯ ಯುವ ಸಮಾವೇಶದಲ್ಲಿ ಭಾಗಿಯಾಗಿದ್ದು, ಅವಿಸ್ಮರಣೀಯ.

ಮುಂದೆ ಅವರು ಭಾಜಪದ ಯುವ ಮೋರ್ಚಾದ ಜವಾಬ್ದಾರಿ ತೆಗೆದುಕೊಂಡರು. ಆದರೆ ಆಗಿನ್ನು ಯುವ ಮೋರ್ಚಾ ಶಿಶು. ಅದರ ಬೆಳವಣಿಗೆಗೆ ಅವರು ಅವಿರತವಾಗಿ ಶ್ರಮಿಸುತ್ತಿದ್ದರು. ಆಗ ಜಿಲ್ಲೆಗೆ ಪ್ರವಾಸ ಮಾಡಿದಾಗ ನಮ್ಮ ಜತೆಗೂ ಅಭಾವಿಪದ ಬೆಳವಣಿಗೆ ಬಗ್ಗೆ ತುಂಬಾ ಕಾಳಜಿಯಿಂದ ಚರ್ಚಿಸುತ್ತಿದ್ದರು. ರಾತ್ರಿ ಅವರನ್ನು ಬಸ್‌ಗೆ ಹತ್ತಿಸುವ ಜವಾಬ್ದಾರಿ ಹೆಚ್ಚುಕಡಿಮೆ ನನಗೆ ಇರುತಿತ್ತು. ಅವರಲ್ಲಿ ಎಂದಿಗೂ ಸ್ವಾರ್ಥ ಚಿಂತನೆ ಇರುತ್ತಿರಲಿಲ್ಲ. ಅವರು ಉತ್ತರ ಕರ್ನಾಟಕದಲ್ಲಿ ಲಿಂಗಾಯತರು ಬಿಜೆಪಿಗೆ ಬರಬೇಕು. ಅದು ಕೂಡ ಗೌಡರು, ಪಾಟೀಲರು ಹಾಗೂ ಶಿಕ್ಷಣ ಸಂಸ್ಥೆ ನಡೆಸುವಂಥ ಗಣ್ಯ ವ್ಯಕ್ತಿಗಳು ಬರಬೇಕು ಅಂಥವರನ್ನು ಹುಡುಕಿ ಪಟ್ಟಿ ಮಾಡಲು ಹೇಳುತ್ತಿದ್ದರು. ಮುಂದಿನ ದಿನಗಳಲ್ಲಿ ಅಂಥವರನ್ನು ಬೇರೆ, ಬೇರೆ ಕಾರಣ, ನೆಪ ಇಟ್ಟುಕೊಂಡು ಭೇಟಿಯಾಗಿ ಪಾರ್ಟಿ ಬೆಳೆಸುವ ಬಗ್ಗೆ ಮಾತ್ರ ಚಿಂತಿಸುತ್ತಿದ್ದರು. ತಾವೆಂದೂ ಪಾರ್ಟಿಯಲ್ಲಿ ಯಾವುದೋ ಅಧಿಕಾರ ಅನುಭವಿಸಬೇಕು ಎಂಬ ಆಶಯ ಇರುತ್ತಿರಲಿಲ್ಲ.

ಅವರ ನೆರಳಲ್ಲಿ ನಾನು ಇದ್ದಿದ್ದಕ್ಕೆ ಮತ್ತು ಅವರ ಆದರ್ಶಗಳ ಗುಂಗು ಇರುವುದಕ್ಕೆ 1994ರಲ್ಲಿ ಭಾಜಪ ಯುವ ಮೋರ್ಚಾದ ಮೂಲಕ ರಾಜಕೀಯ ಪ್ರವೇಶಿಸಿದೆ. ಪಕ್ಷದ ಅನೇಕ ಜವಾಬ್ದಾರಿಗಳನ್ನು ನಿಭಾಯಿಸಿ ಅಖಂಡ ವಿಜಯಪುರ ಜಿಲ್ಲೆ ಮತ್ತು ಈಗಿನ ಬಾಗಲಕೋಟೆ ಜಿಲ್ಲೆಯಲ್ಲಿ ಬಿಜೆಪಿ ಕಟ್ಟಿ ಬೆಳೆಸಲು ನನ್ನದೂ ಕೂಡ ಅಲ್ಪಶ್ರಮವಿದೆ ಎಂದರೆ ತಪ್ಪಾಗಲಾರದು.

ಅನೇಕರು ಈಗ ನನ್ನನ್ನು "ಯಾಕ್ರಿ ಇಷ್ಟು ವರ್ಷ ಪಕ್ಷದಲ್ಲಿದ್ದರೂ ಏನೂ ಆಗಲಿಲ್ಲ ಎಂದು ಕೇಳೋರೇ ಹೆಚ್ಚು" ನಾನು ಅವರಿಗೆಲ್ಲ ನಗುತ್ತ ಉತ್ತರಿಸುವುದು ಒಂದೇ "ನಮ್ಮ ಹಿರಿಯರು ಪಾರ್ಟಿ ಹೇಗೆ ಕಟ್ಟಬೇಕೆಂದು ಕಲಿಸಿದರೆ ಹೊರತು ಪಕ್ಷದಲ್ಲಿ ನಾನು ಹೇಗೆ ಬೆಳೆಯಬೇಕೆಂದಲ್ಲ". ದಿ.ಅನಂತಕುಮಾರ ಅವರು ನಮ್ಮಲ್ಲಿ ಎರಡು ಕನಸುಗಳನ್ನು ಬಿತ್ತಿ ಗುರಿ ನೀಡಿದ್ದರು. ಅದರಲ್ಲಿ ನಾನು ಯಶಸ್ವಿಯಾಗಿದ್ದೇನೆ ಎಂಬ ತೃಪ್ತಿಯಿದೆ. ಅದೇನೆಂದರೆ ಈ ದೇಶದಲ್ಲಿ ಒಮ್ಮೆ ವಾಜಪೇಯಿ ಅವರು ಪ್ರಧಾನಿಯಾಗಲು ಕೆಲಸ ಮಾಡು, ಇನ್ನೊಂದು ನಿನ್ನ ಮಣ್ಣಿನ ನೆಲದಲ್ಲಿ ಬಿಜೆಪಿಯ ಶಾಸಕ, ಸಂಸದರನ್ನು ಗೆಲ್ಲಿಸಲು ಶ್ರಮಿಸು. ಅಷ್ಟು ಸಾಕು ಭಾರತಾಂಬೆ ನಿನ್ನ ಕೊಡುಗೆ ಎಂದಿದ್ದರು. ನನಗೆ ಅದರಲ್ಲಿ ಇಂದು ತೃಪ್ತಿಯಿದೆ.


ಅಲ್ಲದೇ ನೀನು ಏನಾದರೂ ಆಗುವುದಿದ್ದರೆ ಬೆಂಗಳೂರಿಗೆ ನನ್ನ ಬಳಿ ಬಾ ಎಂದಿದ್ದರು. ಆದರೆ ಅವರು ನನಗೆ ಎಂದೂ ಸ್ವಾರ್ಥ ಕಲಿಸಿ ಕೊಡದೆ ಇದ್ದ ಕಾರಣಕ್ಕೆ ನಾನು ತೆರಳಲಿಲ್ಲ.

**-ಜಯಂತ ಕುರಂದವಾಡ,**
**ಬಾಗಲಕೋಟೆ.** ◆

---

ಪುಟ 5 ರಿಂದ

ಭಾರತವು ಲಸಿಕೆ ನಿರ್ವಹಣೆಯಲ್ಲಿ ಜಾಗತಿಕ ಮನ್ನಣೆ ಗಳಿಸಿದ್ದು, ಇದರ ಹಿಂದೆ AI ತಂತ್ರಜ್ಞಾನಗಳ ಪ್ರಮುಖ ಪಾತ್ರವಿದೆ. ಕೋವಿಡ್ ವ್ಯಾಕ್ಸಿನೇಶನ್ ಡ್ರೈವ್‌ನಲ್ಲಿ ಕೋಲ್ಡ್ ಚೈನ್, ಲಸಿಕೆಗಳ ಸಂಗ್ರಹಣೆ, ದಾಸ್ತಾನು ಮತ್ತು ಲಾಜಿಸ್ಟಿಕ್ಸ್ ಅನ್ನು AI ಚಾಲಿತ ವಿಧಾನಗಳಿಂದ ಅತ್ಯಂತ ಪರಿಣಾಮಕಾರಿಯಾಗಿ ನಿರ್ವಹಿಸಲಾಯಿತು. ಇದು ಒಂದೇ ಒಂದು ಲಸಿಕೆಯ ಡೋಸ್ ಕೂಡ ವ್ಯರ್ಥವಾಗದಂತೆ ಖಚಿತಪಡಿಸಿತು. ಇದಲ್ಲದೆ, ರೋಗಿಗಳಿಗೆ ಸಹಾಯ ಮಾಡುವ, ಅವರ ಪ್ರಶ್ನೆಗಳಿಗೆ ಉತ್ತರಿಸುವ ಮತ್ತು ವೈದ್ಯರೊಂದಿಗೆ ಸಂಪರ್ಕ ಕಲ್ಪಿಸುವ AI ಚಾಟ್‌ಬಾಟ್‌ಗಳು ವ್ಯಾಪಕವಾಗಿ ಬಳಕೆಯಾಗುತ್ತಿವೆ.



### AI ಯ ಸವಾಲುಗಳು ಮತ್ತು ಜವಾಬ್ದಾರಿಗಳು

AI ಮೂರು ಪ್ರಮುಖ ರೀತಿಗಳಲ್ಲ ಕಾರ್ಯನಿರ್ವಹಿಸುತ್ತದೆ: ವರ್ಧನೆ (ಮಾನವನ ಸಾಮರ್ಥ್ಯಕ್ಕೆ ಸಹಾಯ), ಭಾಗಶಃ ಸ್ವಾಯತ್ತತೆ, ಮತ್ತು ಪೂರ್ಣ ಸ್ವಾಯತ್ತತೆ. ಆದರೆ AI ದೋಷಾತೀತವಲ್ಲ. ಒಂದು ಚಿತ್ರದ ಕೇವಲ ಕೆಲವು ಪಿಕ್ಸೆಲ್‌ಗಳನ್ನು ಬದಲಾಯಿಸಿದರೆ, ಅದು ತಪ್ಪು ರೋಗನಿರ್ಣಯಕ್ಕೆ ಕಾರಣವಾಗಬಹುದು. ಆರೋಗ್ಯ ರಕ್ಷಣೆಯಲ್ಲಿ ಇಂತಹ ತಪ್ಪುಗಳು ಜೀವಕ್ಕೆ ಅಪಾಯ ತರಬಹುದು. ಆದ್ದರಿಂದ, AI ತಂತ್ರಜ್ಞಾನವು ವಿಶ್ವಾಸಾರ್ಹ, ಜವಾಬ್ದಾರಿಯುತ ಮತ್ತು ಪಾರದರ್ಶಕವಾಗಿರಬೇಕು.



### ಭಾರತಕ್ಕೆ AI ಯ ಅವಕಾಶಗಳು

ಭಾರತಕ್ಕೆ, AI, IoT ಮತ್ತು ಯಂತ್ರ ಕಲಿಕೆಯ ಸಂಯೋಜನೆಯು ಅಪಾರ ಸಾಧ್ಯತೆಗಳನ್ನು ತೆರೆಯುತ್ತದೆ. ಉದಾಹರಣೆಗೆ, ನೈಜ-ಸಮಯದ ಭಾಷಾ ತರ್ಜುಮೆ ತಂತ್ರಜ್ಞಾನಗಳು ರಾಷ್ಟ್ರೀಯ ಏಕೀಕರಣವನ್ನು ಉತ್ತೇಜಿಸುತ್ತವೆ. ಬಾಂಗ್ಲಾದಲ್ಲಿ ಮಾತನಾಡಿದ ಮಾತನ್ನು ಕನ್ನಡದಲ್ಲಿ ಅರ್ಥಮಾಡಿಕೊಳ್ಳುವ ವ್ಯವಸ್ಥೆ ಒಂದು ಉದಾಹರಣೆ.

ಇನ್ನೊಂದು ಮಹತ್ವದ ಅವಕಾಶವೆಂದರೆ, ಕಡಿಮೆ ವೆಚ್ಚದ, ಸ್ಥಳೀಯ ಭಾಷೆಗಳಲ್ಲಿ ಸೂಚನೆ ನೀಡುವ AI ಸಕ್ರಿಯ ಸ್ಟೆತಸ್ಕೋಪ್‌ಗಳನ್ನು ಅಭಿವೃದ್ಧಿಪಡಿಸುವುದು. "ಇನ್ನಷ್ಟು ಬಲಕ್ಕೆ ಒತ್ತಿರಿ" ಎಂದು ಸ್ಥಳೀಯ ಭಾಷೆಯಲ್ಲಿ ಸೂಚನೆ ನೀಡುವ ಸಾಧನಗಳು ಆರೋಗ್ಯ ಸೇವೆಗಳನ್ನು ಗ್ರಾಮೀಣ ಪ್ರದೇಶಗಳಿಗೂ ತಲುಪಲು ಸಹಾಯ ಮಾಡುತ್ತವೆ. ಇಂತಹ ಸ್ಥಳೀಯ ಮತ್ತು ಕಡಿಮೆ ವೆಚ್ಚದ ಆವಿಷ್ಕಾರಗಳ ಮೂಲಕ ಭಾರತವು ಜಾಗತಿಕ ಆರೋಗ್ಯ ರಕ್ಷಣೆಯಲ್ಲಿ ಮುಂಚೂಣಿಗೆ ಬರಬಹುದು.

ಈ ತಂತ್ರಜ್ಞಾನವನ್ನು ಸಮರ್ಥವಾಗಿ ಬಳಸಿಕೊಂಡು, ಭಾರತವು ಕಡಿಮೆ ವೆಚ್ಚದ, ಪರಿಣಾಮಕಾರಿ, ಮತ್ತು ಸ್ಥಳೀಯ ಅವಶ್ಯಕತೆಗಳಿಗೆ ಸೂಕ್ತವಾದ ಆರೋಗ್ಯ ಪರಿಹಾರಗಳನ್ನು ಅಭಿವೃದ್ಧಿಪಡಿಸಬಲ್ಲದು. ಸಂಕ್ಷಿಪ್ತವಾಗಿ ಹೇಳುವುದಾದರೆ, ಕೃತಕ ಬುದ್ಧಿಮತ್ತೆಯು ಆರೋಗ್ಯ ಸೇವೆಗಳನ್ನು ಹೆಚ್ಚು ಪರಿಣಾಮಕಾರಿ, ಸುಲಭ ಮತ್ತು ಎಲ್ಲರಿಗೂ ತಲುಪುವಂತೆ ಮಾಡುವ ಶಕ್ತಿಯನ್ನು ಹೊಂದಿದೆ. ಈ ಅವಕಾಶವನ್ನು ಸರಿಯಾಗಿ ಬಳಸಿಕೊಂಡರೆ, ಭಾರತದ ಆರೋಗ್ಯ ರಕ್ಷಣೆಯ ಭವಿಷ್ಯವು ಉಜ್ವಲವಾಗಿದೆ."

# ತಿಂಗಳ ವರದಿ
( ಜುಲೈ - ಆಗಸ್ಟ್ 2025)

## ಅದಮ್ಯ ಚೇತನದ 501 ನೇ ಹಸಿರು ಭಾನುವಾರ: ಪರಿಸರ ಸಂರಕ್ಷಣೆಯ ಹೆಜ್ಜೆ






03 ಆಗಸ್ಟ್ 2025 ರಂದು ಉತ್ತರಹಳ್ಳಿಯ ಶ್ರೀ ಶಾರದಾಪೀಠ ಶೃಂಗೇರಿ ಸಂಸ್ಥೆಯ ಜ್ಞಾನಕೇಂದ್ರದ ಆವರಣದಲ್ಲಿ ಅದಮ್ಯ ಚೇತನ ಸಂಸ್ಥೆಯ 501ನೇ ಹಸಿರು ಭಾನುವಾರ ಕಾರ್ಯಕ್ರಮವು ಯಶಸ್ವಿಯಾಗಿ ಜರುಗಿತು. ಈ ಸಂದರ್ಭದಲ್ಲಿ 500 ಕ್ಕೂ ಹೆಚ್ಚು ಸ್ವಯಂ ಸೇವಕರು ಪಾಲ್ಗೊಂಡು 500ಕ್ಕೂ ಹೆಚ್ಚು ಗಿಡಗಳನ್ನು ನೆಟ್ಟು ಪರಿಸರದ ಬಗ್ಗೆ ತಮ್ಮ ಕಾಳಜಿಯನ್ನು ವ್ಯಕ್ತಪಡಿಸಿದರು.

ಕಾರ್ಯಕ್ರಮದ ಕುರಿತು ಮಾತನಾಡಿದ ಭಾರತೀಯ ವಿಜ್ಞಾನ ಸಂಸ್ಥೆಯ ಪ್ರೊ. ಟಿ. ವಿ. ರಾಮಚಂದ್ರ, "ನಾವು ಮುಂದಿನ ಪೀಳಿಗೆಗೆ ಸಂಪತ್ತಿನ ಜೊತೆಗೆ ಆರೋಗ್ಯಕರ ಪರಿಸರವನ್ನು ನೀಡಬೇಕು. ಬೆಂಗಳೂರಿನಲ್ಲಿ 8 ವರ್ಷಗಳ ಹಿಂದೆ ನಡೆಸಿದ ಅಧ್ಯಯನದ ಪ್ರಕಾರ, 9.5 ಮಿಲಿಯನ್ ಜನಸಂಖ್ಯೆಗೆ ಕೇವಲ 1.47 ಮಿಲಿಯನ್ ಮರಗಳು ಇದ್ದವು. ಅಂದರೆ, ಏಳು ಜನರಿಗೆ ಕೇವಲ ಒಂದು ಮರ! ಆದರೆ, ಪ್ರತಿಯೊಬ್ಬರಿಗೂ ಕನಿಷ್ಠ ಏಳು ಮರಗಳ ಅಗತ್ಯವಿದೆ, ಈ ಅಸಮತೋಲನವನ್ನು ಸರಿಪಡಿಸಲು ಅನಂತಕಮಾರ್ ಅವರು ಹಸಿರು ಭಾನುವಾರ ಕಾರ್ಯಕ್ರಮ ಪ್ರಾರಂಭಿಸಲು ಪ್ರೇರಣೆ ನೀಡಿದರು. 2016ರಲ್ಲಿ ಪ್ರಾರಂಭಿಸಿದ ಹಸಿರು ಭಾನುವಾರ ಕಾರ್ಯಕ್ರಮವು ಇಂದು 501 ವಾರಗಳನ್ನು ಪೂರೈಸಿರುವು ಹೆಮ್ಮೆಯ ಸಂಗತಿ. ಮುಂದಿನ ಪೀಳಿಗೆಯ ಭವಿಷ್ಯವನ್ನು ಕಾಪಿಡಲು ಈ ಕಾರ್ಯಕ್ರಮ ಬಹಳ ಅಗತ್ಯವಾಗಿದೆ" ಎಂದರು. ಇಂದಿನ ದಿನಗಳಲ್ಲಿ ಅಭಿವೃದ್ಧಿಯ ಹೆಸರಲ್ಲಿ ಅನವಶ್ಯಕವಾಗಿ ಮರಗಳನ್ನು ಕಡಿಯುವುದು ಹೆಚ್ಚಾಗಿದೆ. ಪರಿಸರ ಸಮತೋಲನ ಕಾಪಾಡಿಕೊಳ್ಳದೆ, ಮರಗಳನ್ನು ಕಡಿಯುವುದು ಆತಂಕಕಾರಿಯಾಗಿದೆ. ಪ್ರತಿ ಕಡಿತಗೊಂಡ ಮರಕ್ಕೆ ಕನಿಷ್ಠ 9-10 ಮರಗಳನ್ನು ನೆಡುವುದು ಕಡ್ಡಾಯವಾಗಬೇಕು ಎಂದೂ ಅವರು ಕರೆ ನೀಡಿದರು..

ಅದಮ್ಯ ಚೇತನ ಸಂಸ್ಥೆಯ ಮುಖ್ಯಸ್ಥೆ ಶ್ರೀಮತಿ ತೇಜಸ್ವಿನಿ ಅನಂತ್‌ಕುಮಾರ್ ಮಾತನಾಡಿ, "ಈ ಕಾರ್ಯಕ್ರಮವು ಯಾವುದೇ ರಾಜಕೀಯ ಉದ್ದೇಶಕ್ಕಾಗಿ ಅಲ್ಲ, ಬದಲಿಗೆ ಪ್ರಕೃತಿಯ ಮೇಲಿನ ಪ್ರೀತಿಯಿಂದ ಆರಂಭವಾಗಿದೆ. ಜನವರಿ 2016ರಿಂದ, ಬಿಸಿಲು, ಮಳೆ, ಕೋವಿಡ್‌ನಂತಹ ಸವಾಲುಗಳ ನಡುವೆಯೂ ಪ್ರತಿ ಭಾನುವಾರ ಗಿಡಗಳನ್ನು ನೆಡುತ್ತಿದ್ದೇವೆ. ಇದಕ್ಕೆ ಶ್ರೀ ಅನಂತಕುಮಾರ್ ಅವರ ದಿಟ್ಟ ದೃಷ್ಟಿಕೋನವೇ ಸ್ಫೂರ್ತಿಯಾಗಿದೆ" ಎಂದರು. ಸಂಸ್ಥೆಯ ಇತರ ಯೋಜನೆಗಳ ಬಗ್ಗೆಯೂ ಮಾಹಿತಿ ಹಂಚಿಕೊಂಡರು. "ಪ್ಲೇಟ್ ಬ್ಯಾಂಕ್ ಯೋಜನೆಯ ಮೂಲಕ ಮರುಬಳಕೆ ಮಾಡಬಹುದಾದ ತಟ್ಟೆಗಳನ್ನು ಬಳಸಲು ಉತ್ತೇಜಿಸುತ್ತಿದ್ದೇವೆ. ಈ ಯೋಜನೆಯು ಈಗ ದೇಶದ 26 ನಗರಗಳಿಗೆ ವಿಸ್ತರಿಸಿದೆ. ಜೊತೆಗೆ, ಒಂಬತ್ತು ಕೇಂದ್ರಗಳಲ್ಲಿ ಪ್ರತಿದಿನ ನಿತ್ಯ ಅನ್ನದಾನ ಕಾರ್ಯಕ್ರಮವೂ ನಡೆಯುತ್ತಿದೆ" ಎಂದು ತಿಳಿಸಿದರು.

ಅದಮ್ಯ ಚೇತನದ ಹಸಿರು ಭಾನುವಾರ ಕಾರ್ಯಕ್ರಮವು ಕೇವಲ ಮರ ನೆಡುವುದಕ್ಕೆ ಸೀಮಿತವಲ್ಲ, ಮುಂದಿನ ಪೀಳಿಗೆಗೆ ಆರೋಗ್ಯಕರ ಭವಿಷ್ಯವನ್ನು ಕೊಡುಗೆಯಾಗಿ ನೀಡುವ ಒಂದು ಚಳವಳಿಯಾಗಿದೆ. ಪರಿಸರ ಸಂರಕ್ಷಣೆಗಾಗಿ ನಾವೆಲ್ಲರೂ ಒಗ್ಗೂಡಿ ಕೆಲಸ ಮಾಡಬೇಕಾದ ಸಮಯ ಇದಾಗಿದೆ" ಎಂದೂ ಅವರು ಹೇಳಿದರು.

**ಹಸಿರು ಭಾನುವಾರ:** ಹಸಿರು ಭಾನುವಾರ: ಅದಮ್ಯ ಚೇತನದ ಹಸಿರು ಭಾನುವಾರದ ಯೋಜನೆಯಡಿ, 500 ರಿಂದ 503ನೇ ಭಾನುವಾರಗಳವರೆಗೆ ವಿವಿಧ ಸ್ಥಳಗಳಲ್ಲಿ ಗಿಡ ನೆಡುವ ಕಾರ್ಯಕ್ರಮಗಳು ಯಶಸ್ವಿಯಾಗಿ ಜರುಗಿದವು. 500, 501, 502, ಮತ್ತು 503 ಹಸಿರು ಭಾನುವಾರಗಳನ್ನು ಕ್ರಮವಾಗಿ, ಅಯೋಧ್ಯೆಯ ನಗರದ ಡಾಭಾಸೇಮರ್ ಕಂಪೋಸಿಟ್ ಶಾಲಾ ಆವರಣ ಮತ್ತು ಡಾ. ಮನೋಹರ್ ಲೋಹಿಯಾ ಅವಧ್ ವಿಶ್ವವಿದ್ಯಾಲಯದ ಕ್ಯಾಂಪಸ್ ಆವರಣ, ಉತ್ತರಹಳ್ಳಿಯ ಶ್ರೀ ಶಾರದಾಪೀಠ ಶೃಂಗೇರಿ ಸಂಸ್ಥೆಯ ಜ್ಞಾನಕೇಂದ್ರದ ಆವರಣ, ಬೆಂಗಳೂರಿನ ಸರ್ ಎಂ. ವಿಶ್ವೇಶ್ವರಯ್ಯ ಲೇಔಟ್ 1ನೇ ಬ್ಲಾಕ್ ನೀರಿನ ಟ್ಯಾಂಕ್ ಸಮೀಪದ ಆವರ್ಣ ಬೆಂಗಳೂರಿನ ಶಿವನಪುರದ ನೆಮ್ಮದಿ ಪಾಲಿಯೇಟಿವ್ ಕೇರ್ ಸೆಂಟರ್ ನಡೆಯಿತು. ಈ ಎಲ್ಲಾ ಕಾರ್ಯಕ್ರಮಗಳಲ್ಲಿ, ಸಂಸ್ಥೆಯ ಸ್ವಯಂಸೇವಕರು, ಕಾರ್ಯಕರ್ತರು, ಬಿಎಂಎಸ್ ಕಾಲೇಜು ವಿದ್ಯಾರ್ಥಿಗಳು, ಹಸಿರು ಯೋಧರು ಮೊದಲಾದವರು ಭಾಗವಹಿಸಿದ್ದರು.

## ಅದಮ್ಯ ಚೇತನ ಮತ್ತು ನಿರ್ಮಲ್ ಗೆಹಲೋಟ್ ಚಾರಿಟೇಬಲ್ ಟ್ರಸ್ಟ್‌ನ ಸಹಯೋಗದಲ್ಲಿ ಉಚಿತ ಅನ್ನದಾನ ಸೇವೆಯ ಉದ್ಘಾಟನೆ:



ಆಗಸ್ಟ್ 14 2025ರಂದು ಜೋಧಪುರದ ಉಮ್ಮೇದ್ ಆಸ್ಪತ್ರೆಯ ಆವರಣದಲ್ಲಿ ಅವಶ್ಯಕತೆ ಹೊಂದಿರುವ ರೋಗಿಗಳ ಕುಟುಂಬಗಳಿಗೆ ಉಚಿತ ಅನ್ನದಾನ ಸೇವೆಯನ್ನು ಅದಮ್ಯ ಚೇತನ ಮತ್ತು ನಿರ್ಮಲ್ ಗೆಹಲೋಟ್ ಚಾರಿಟೇಬಲ್ ಟ್ರಸ್ಟ್‌ನ ಸಹಯೋಗದಲ್ಲಿ ಆರಂಭಿಸಲಾಯಿತು. ಈ ಸೇವೆಯನ್ನು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮತ್ತು ಡಾ. ನಿರ್ಮಲ್ ಕುಮಾರ್ ಗೆಹಲೋಟ್ ಅವರು ಉದ್ಘಾಟಿಸಿದರು.

ಅನಂತಪಥ

Published by: Tejaswini Ananthkumar

For-Ananthkumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 | Email: ananth.path@akp.org.in

ಸ್ಪಷ್ಟನೆ: ಆನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು: ಈ ಪಠ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

## ಅದಮ್ಯ ಸೇವಾ

## ( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )




ನವಕರ್ನಾಟಕ ಪ್ರಕಾಶನದಿಂದ ಪ್ರಕಟವಾದ ಶಾಲಿನಿ ಮೂರ್ತಿ ಅವರ ಕಥೆಗಳ ತೋರಣ ಕೃತಿಯ ಬಿಡುಗಡೆ ಸಮಾರಂಭದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿದರು.



ಅದ್ವಿಕಾ ಫೌಂಡೇಶನ್ ಸಂಸ್ಥೆಯ 3ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಭಾಗವಹಿಸಿದರು.



ಆಗಸ್ಟ್ 16 ರಂದು ಅಟಲ್ ಜಿ ಜನ್ಮ ಶತಮಾನೋತ್ಸವ ಸಮಿತಿಯ ವತಿಯಿಂದ ದಿ. ಅಟಲ್ ಬಿಹಾರಿ ವಾಜಪೇಯಿ ಅವರ ಸ್ಮರಣ ಸಂಚಿಕೆ ಲೋಕಾರ್ಪಣೆ ನೆರವೇರಿತು. ಈ ಸಂದರ್ಭದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಅನಂತಕುಮಾರ್ ಅವರೊಂದಿಗೆ ಅಟಲ್ ಜಿಯ ನೆನಪುಗಳನ್ನು ಸ್ಮರಿಸಿದರು.




ಆಗಸ್ಟ್ 15ರಂದು ಬೆಂಗಳೂರಿನ ಅದಮ್ಯ ಚೇತನದಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು.



ಹುಬ್ಬಳ್ಳಿಯ ಶ್ರೀ ಮಹಾವೀರ್ ಶಿಕ್ಷಣ ಸಂಸ್ಥೆಯ 145 ವಿದ್ಯಾರ್ಥಿಗಳು ಹಾಗೂ 13 ಶಿಕ್ಷಕರು ಅನಂತ ಪ್ರೇರಣಾ ಕೇಂದ್ರಕ್ಕೆ ಭೇಟಿ ನೀಡಿದರು.



ರಾಜಸ್ಥಾನ ಜೋಧಪುರದ ಅದಮ್ಯ ಚೇತನ ಆವರಣದಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಧ್ವಜಾರೋಹಣ ನೆರವೇರಿಸಿ, ಪವಿತ್ರ ಸೀತಾಶೋಕ ಗಿಡವನ್ನು ನೆಟ್ಟರು.



ಕಲಬುರಗಿಯಲ್ಲಿ ಅದಮ್ಯ ಚೇತನದಿಂದ ಅನ್ನದಾನ ಸೇವೆ ನಿರಂತರವಾಗಿ ನಡೆಯುತ್ತಿದೆ.



ಅದಮ್ಯ ಚೇತನದ ಹಸಿರು ಭಾನುವಾರ 503ನೇ ಹಸಿರು ಭಾನುವಾರ ಕಾರ್ಯಕ್ರಮ ಬೆಂಗಳೂರಿನ ಶಿವನಪುರದ ನೆಮ್ಮದಿ ಪಾಲಿಯೇಟಿವ್ ಕೇರ್ ಸೆಂಟರ್ ಆವರಣದಲ್ಲಿ ಯಶಸ್ವಿಯಾಗಿ ಜರುಗಿತು.

# ಅನಂತ ಚಿತ್ರಸಂಪುಟ

ಶ್ರೀ ಅನಂತಕುಮಾರ್ ಅವರ ಜೀವನದಲ್ಲಿ ನಿರಂತರತೆ ಒಂದು ಮಹತ್ವದ ಅಂಶವಾಗಿತ್ತು. ಅವರು ಆರಂಭಿಸಿದ 'ಹಸಿರು ಭಾನುವಾರ'ದಂತಹ ಕಾರ್ಯಕ್ರಮಗಳು ಈಗಲೂ ಮುಂದುವರಿದಿವೆ. ಸುಮಾರು ಎರಡು ದಶಕಗಳ ಕಾಲ ಸೌತ್ ಎಂಡ್ ವೃತ್ತದಲ್ಲಿರುವ ಕಚೇರಿಯಲ್ಲಿ ರಕ್ಷಾಬಂಧನ ಆಚರಣೆ ತಪ್ಪದೆ ನಡೆಯುತ್ತಿತ್ತು. ಪ್ರತಿ ವರ್ಷ ನೂರಾರು ಮಹಿಳೆಯರು ಅವರಿಗೆ ರಾಖಿ ಕಟ್ಟುತ್ತಿದ್ದರು.











